ಇ-ಮೇಲ್: ussplcell-rev@karnataka.gov.in

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	2158
ಸದಸ್ಯರ ಹೆಸರು	ಶ್ರೀ ಕುಮಾರಸ್ವಾಮಿ.ಹೆಚ್.ಕೆ (ಸಕಲೇಶಪುರ)
ಉತ್ತರಿಸುವ ಸಚಿವರು	ಕಂದಾಯ ಸಚಿವರು
ಉತ್ತರಿಸುವ ದಿನಾಂಕ	(17.03.2020 – ಒಳಾಡಳಿತ ಇಲಾಖೆಯಿಂದ ವರ್ಗಾವಣೆಗೊಂಡಿರುವ ಪ್ರಶ್ನೆ)

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಹಾಸನದಲ್ಲಿ ಹೇಮಾವತಿ/ಯಗಚಿ/ವಾಟೆಹೊಳೆ ಜಲಾಶಯ ನಿರ್ಮಾಣಕ್ಕಾಗಿ ಜಮೀನು ಕಳೆದುಕೊಂಡ ಸಂತ್ರಸ್ಥರಿಗೆ ಜಮೀನು ಮಂಜೂರು ಮಾಡುವ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡು ಭೂ ಸಂತ್ರಸ್ಥರಿಗೆ ಮೀಸಲಿರಿಸಲಾದ ಸಾವಿರಾರು ಎಕರೆ ಜಮೀನನ್ನು ಕಾನೂನು ಬಾಹಿರವಾಗಿ ನಕಲಿ ದಾಖಲಾತಿಗಳನ್ನು ಸೃಷ್ಟಿಸಿ ಹಿಂದಿನ ವಿಶೇಷ ಭೂಸ್ವಾಧೀನಾಧಿಕಾರಿಗಳು ಜಿಲ್ಲಾ ಪಂಚಾಯಿತಿಯಲ್ಲಿ ಉಪಕಾರ್ಯದರ್ಶಿ (ಆಡಳಿತ), ವಿಶೇಷ ಭೂಸ್ವಾಧೀನಾಧಿಕಾರಿ ಕಛೇರಿಯ ಅಧಿಕಾರಿಗಳು, ಸಕಲೇಶಪುರ ಉಪವಿಭಾಗಾಧಿಕಾರಿ ಕಛೇರಿಯ ಅಧಿಕಾರಿಗಳು,ಸಕಲೇಶಪುರ, ಬೇಲೂರು, ಅರಕಲಗೂಡು ಮತ್ತು ಹಾಸನದ ತಾಲ್ಲೂಕು ಕಛೇರಿಯ ಅಧಿಕಾರಿಗಳು ಭೂ ಮಾಫಿಯಾ ರವರೊಂದಿಗೆ ಶಾಮೀಲಾಗಿ ಸಾವಿರಾರು ಎಕರೆ ಜಮೀನುಗಳನ್ನು ತಮ್ಮ ಸಂಬಂಧಿಕರಿಗೆ ಹಾಗೂ ಭೂ ಸಂತ್ರಸ್ಥರಲ್ಲದವರಿಗೆ ಮಂಜೂರು ಮಾಡಿ, ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿಗಳ ನಷ್ಟವುಂಟು ಮಾಡಿರುವ ಬಗ್ಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಉಪ ವಿಭಾಗಾಧಿಕಾರಿಗಳು, ಹಾಸನ ಉಪವಿಭಾಗ, ಉಪ ವಿಭಾಗಾಧಿಕಾರಿಗಳು, ಸಕಲೇಶಪುರ ಉಪವಿಭಾಗ, ವಿಶೇಷ ಭೂಸ್ವಾಧೀನಾಧಿಕಾರಿ, ಹೇಮಾವತಿ ಜಲಾಶಯ ಯೋಜನೆ, ಹಾಸನ ಹಾಗೂ ವಿಶೇಷ ಭೂಸ್ವಾಧೀನಾಧಿಕಾರಿ, ಎತ್ತಿನಹೊಳೆ ಜಲಾಶಯ	ಹೌದು. ಹಾಸನ ಜಿಲ್ಲೆಯಲ್ಲಿ ಹೇಮಾವತಿ/ಯಗಚಿ/ ವಾಟೆಹೊಳೆ ಜಲಾಶಯ ಯೋಜನೆಯ ಮುಳುಗಡೆ ಸಂತ್ರಸ್ಥರಿಗೆ ಮಂಜೂರು ಮಾಡಲು ಕಾಯ್ದಿರಿಸಿರುವ ಭೂಮಿಯಲ್ಲಿ ಅಕ್ರಮವಾಗಿ ಜಮೀನು ಮಂಜೂರು ಆಗಿದೆ ಎಂದು ದೂರು ದಾಖಲು ಆಗಿರುವ ಹಿನ್ನಲೆಯಲ್ಲಿ ಪರಿಶೀಲನಾ ಸಮಿತಿಯ ಅಭಿಪ್ರಾಯವನ್ನು ಪರಿಶೀಲಿಸಲಾಗಿ ಬಹುತೇಕ ಪ್ರಕರಣಗಳಲ್ಲಿ ಅಕ್ರಮವಾಗಿ ಸೃಷ್ಟಿಕೃತ ದಾಖಲೆಯಂತೆ ಜಮೀನು ಮಂಜೂರು ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದು ಕಂಡು ಬಂದಿರುತ್ತದೆ.ಉನ್ನತ ಮಟ್ಟದ ತನಿಖೆಯನ್ನು ನಡೆಸಲು ಕ್ರಮ ಕೈಗೊಳ್ಳಬಹುದಾಗಿರುವುದರಿಂದ ಜಿಲ್ಲಾಧಿಕಾರಿ, ಹಾಸನ ಜಿಲ್ಲೆ, ಹಾಸನ ರವರ ಪತ್ರ ಸಂಖ್ಯೆ ಎಲ್.ಎನ್.ಡಿ(2)788/2016–17 ದಿನಾಂಕ 03.10.2019 ರಂದು ಸರ್ಕಾರಕ್ಕೆ ವರದಿ ಸಲ್ಲಿಸಲಾಗಿರುತ್ತದೆ. ಜಿಲ್ಲಾಧಿಕಾರಿ ಹಾಸನ ಜಿಲ್ಲೆ ಇವರು ಸಲ್ಲಿಸಲಾದ ವರದಿಯನ್ನು ಪರಿಶೀಲಿಸಿ, ಉನ್ನತ ಮಟ್ಟದ ತನಿಖೆಯನ್ನು ಕೈಗೊಳ್ಳಲು, ಆಯುಕ್ತರು, ರಾಜ್ಯ ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಹಾಗೂ ಪದ ನಿಮಿತ್ತ ಸರ್ಕಾರದ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಇವರನ್ನು ಆದೇಶ ಸಂಖ್ಯೆ:

	ಯೋಜನೆ, ಹಾಸನರವರು ಗಳನ್ನೊಳಗೊಂಡ ತನಿಖಾ ಸಮಿತಿಯು ಸಮಗ್ರ ತನಿಖೆ ನಡೆಸಿ, ಸಂಪೂರ್ಣ ದಾಖಲಾತಿಗಳನ್ನು ಕ್ರೋಢಿಕರಿಸಿ ದಿನಾಂಕ: 12.09.2019ರಂದು ನೀಡಿದ್ದು, ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ತನಿಖಾ ತಂಡದ ವರದಿಯನ್ನು ಮಾನ್ಯ ಜಿಲ್ಲಾಧಿಕಾರಿಗಳು ತಮ್ಮ ಪತ್ರ ಸಂಖ್ಯೆ:ಎಲ್.ಎನ್.ಡಿ(2)788/2016-17, ದಿನಾಂಕ:03.10.2019 ರಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,ಕಂದಾಯ ಇಲಾಖೆ (ಭೂಮಂ) ಬಹುಮಹಡಿಗಳ ಕಟ್ಟಡ, ಬೆಂಗಳೂರು, ರವರಿಗೆ ಕಳುಹಿಸಿರುವುದು ನಿಜವೇ; (ಸಂಪೂರ್ಣ ಮಾಹಿತಿ ನೀಡುವುದು)	ಕಂಇ 59 ವಿಕೋವಿ 2019(ಪಿ-1) ದಿನಾಂಕ: 06.02.2020 ರನ್ವಯ ನೇಮಕ ಮಾಡಿದೆ.
ಆ)	ಹಾಸನದ ಜಿಲ್ಲಾಧಿಕಾರಿಗಳ ಸೂಚನೆಯ ಮೇರೆಗೆ ಹಾಸನ ವಿಶೇಷ ಭೂ ಸ್ವಾಧೀನಾಧಿಕಾರಿಗಳು, ಹೇಮಾವತಿ ಜಲಾಶಯ ಯೋಜನೆ, ಹಾಸನ ಇವರು ದಿನಾಂಕ:24.10.2019 ರಂದು ಹಾಸನದ ನಗರ ಪೊಲೀಸ್ ಠಾಣೆಗೆ ದೂರು ನೀಡಿ ಸದರಿ ದೂರಿನಲ್ಲಿ ದಿನಾಂಕ:01.01.2015 ರಿಂದ ದಿನಾಂಕ: 30.11.2018 ರವರೆಗೆ ಭೂ ಸ್ವಾಧೀನಾಧಿಕಾರಿಗಳ ಕಛೇರಿಯಲ್ಲಿ ಅನಧಿಕೃತವಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಅಧಿಕಾರಿಗಳ ಸಹಿಯನ್ನು ನಕಲಿ ಮಾಡಿ ಸರ್ಕಾರಕ್ಕೆ ಮೋಸ ಮಾಡಿ ಸರ್ಕಾರದ ಸಾವಿರಾರು ಎಕರೆ ಭೂ ಸಂತ್ರಸ್ಥರ ಜಮೀನುಗಳನ್ನು ಅಕ್ರಮವಾಗಿ ಮತ್ತು ಕಾನೂನು ಬಾಹಿರವಾಗಿ 414 ಫಲಾನುಭವಿಗಳಿಗೆ ಮಂಜೂರು ಮಾಡಿರುತ್ತಾರೆ ಎಂದು ದೂರು ನೀಡಿದ್ದು, ಅದರಂತೆ ದಿನಾಂಕ: 24.10.2019 ರಂದು ಹಾಸನದ ನಗರ ಪೊಲೀಸ್ ಠಾಣೆಯ ಎಫ್.ಐ.ಆರ್. ನಂಬರ್.157/2019ರಲ್ಲಿ ಕಲಂ 465, 468, 420 ಐಪಿಸಿ ರೀತ್ಯಾ ಪ್ರಕರಣ ದಾಖಲಾಗಿರುವುದು ನಿಜವೇ? (ಸಂಪೂರ್ಣ ಮಾಹಿತಿ ನೀಡುವುದು) ಹಾಗೂ ಹಾಸನದ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ರವರು ಈ ಅಕ್ರಮಗಳಲ್ಲಿ ಭಾಗಿಯಾಗಿರುವ ಅಧಿಕಾರಿಗಳ ವಿರುದ್ಧ ತೆಗೆದುಕೊಂಡಿರುವ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು)	ಹೌದು. ವಿಶೇಷ ಭೂ ಸ್ವಾಧೀನಾಧಿಕಾರಿಗಳ ಕಛೇರಿಯಲ್ಲಿ ಅನಧಿಕೃತವಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಅಧಿಕಾರಿಗಳ ಸಹಿಯನ್ನು ನಕಲಿ ಮಾಡಿ ಸರ್ಕಾರಕ್ಕೆ ಮೋಸ ಮಾಡಿ ಸರ್ಕಾರದ ಸಾವಿರಾರು ಎಕರೆ ಭೂ ಸಂತ್ರಸ್ಥರ ಜಮೀನುಗಳನ್ನು ಅಕ್ರಮವಾಗಿ ಮತ್ತು ಕಾನೂನು ಬಾಹಿರವಾಗಿ 414 ಫಲಾನುಭವಿಗಳಿಗೆ ಮಂಜೂರು ಮಾಡಿರುವ ಬಗ್ಗೆ ಹಾಸನ ಜಿಲ್ಲೆಯ ಹಾಸನ ನಗರ ಪೊಲೀಸ್ ಠಾಣೆಯಲ್ಲಿ ಮೊ.ನಂ.157/2019 ಕಲಂ 465, 468, 420 ಐಪಿಸಿ ರೀತ್ಯಾ ಪ್ರಕರಣ ದಾಖಲಾಗಿ ತನಿಖೆಯಲ್ಲಿರುತ್ತದೆ. ಈ ಪ್ರಕರಣದಲ್ಲಿ ತನಿಖೆ ಪ್ರಗತಿಯಲ್ಲಿದ್ದು ತನಿಖೆಗೆ ಸಂಬಂಧಪಟ್ಟಂತೆ ದಿನಾಂಕ: 01.01.2015 ರಿಂದ ದಿನಾಂಕ:30.11.2018 ರವರೆಗೆ ಹೇಮಾವತಿ/ಯಗಚಿ ಜಲಾಶಯ ಯೋಜನೆ(ಪುನರ್ ವಸತಿ) ಯೋಜನೆ ಅಡಿಯಲ್ಲಿ ವಿಶೇಷ ಭೂಸ್ವಾಧೀನಾಧಿಕಾರಿಗಳು ಹೇಮಾವತಿ ಜಲಾಶಯ ಯೋಜನೆ (ಪುನರ್ ವಸತಿ) ರವರು ಅಧಿಕೃತ ಜ್ಞಾಪನದೊಂದಿಗೆ ಮಂಜೂರು ಮಾಡಿರುವ ವಿಶೇಷ ಭೂ ಸ್ವಾಧೀನಾಧಿಕಾರಿಗಳ ಕಛೇರಿಯಲ್ಲಿ ಲಭ್ಯವಿರುವ 569 ಕಡತಗಳು ಮತ್ತು ಆಲೂರು, ಹಾಸನ, ಅರಕಲಗೂಡು, ಬೇಲೂರು, ಸಕಲೇಶಪುರ, ಹೊಳೆನರಸೀಪುರ ಮತ್ತು ಸೋಮವಾರಪೇಟೆ ತಾಲ್ಲೂಕುಗಳಿಗೆ ಸಂಬಂಧಪಟ್ಟಂತೆ ಒಟ್ಟು 910

		ಕಡತಗಳಿದ್ದು, ಈ ಕಡತಗಳನ್ನು ಮುಂದಿನ ತನಿಖೆಗಾಗಿ ಅಮಾನತ್ತು ಪಡಿಸಿಕೊಳ್ಳುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ಈ ತಿಂಗಳ ಅಂತ್ಯಕ್ಕೆ ಈ ಎಲ್ಲಾ ಕಡತಗಳನ್ನು ಅಮಾನತ್ತು ಪಡಿಸಿಕೊಳ್ಳುವ ಪ್ರಕ್ರಿಯೆ ಪೂರ್ಣಗೊಳ್ಳಲಿದೆ. ಪಿರ್ಯಾದುದಾರರು ತಮ್ಮ ದೂರಿನಲ್ಲಿ ಯಾರನ್ನೂ ಆರೋಪಿಗಳಾಗಿ ಮಾಡಿರುವುದಿಲ್ಲ.
ಇ)	ಆದರೆ, ನಕಲಿ ದಾಖಲೆಗಳನ್ನು ಸೃಷ್ಟಿಸಿ, ಜಮೀನು ಮಂಜೂರಾತಿ ಪಡೆದ ವ್ಯಕ್ತಿಗಳನ್ನು ಒಳಗೊಂಡಂತೆ ಈ ಅಕ್ರಮ ದಾಖಲೆಗಳ ಆಧಾರದ ಮೇಲೆ ಜಮೀನು ಮಂಜೂರು ಮಾಡಿದ ಅಧಿಕಾರಿಗಳನ್ನು ಸೇರಿಸಿ ಕ್ರಿಮಿನಲ್ ಮೊಕದ್ದಮೆ ಹೂಡಬೇಕಾಗಿದ್ದು, ಈ ರೀತಿ ಮಾಡದೆ ಕೇವಲ ನಕಲಿ ದಾಖಲೆ ಸೃಷ್ಟಿಸಿ ಅಕ್ರಮವಾಗಿ ಜಮೀನುಪಡೆದವರ ಮೇಲೆ ಎಫ್.ಐ.ಆರ್ ದಾಖಲಿಸಿರುವುದು ಸಂಶಯಾಸ್ಪದವಾಗಿದ್ದು ಮತ್ತು ದೋಷಿತ ಅಧಿಕಾರಿಗಳನ್ನು ರಕ್ಷಿಸಲು ಸರ್ಕಾರದ ಕೆಲವು ಅಧಿಕಾರಿಗಳು ಮಾಡಿರುವ ಪ್ರಯತ್ನವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹಾಸನ ನಗರ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ 157/2019 ಕಲಂ 465, 468, 420 ಐಪಿಸಿ ಪ್ರಕರಣದಲ್ಲಿ ಪಿರ್ಯಾದುದಾರರು ನೀಡಿರುವ ದೂರಿನಲ್ಲಿ ಆರೋಪಿತರು ಯಾರೆಂಬುದನ್ನು ನಮೂದು ಮಾಡಿರುವುದಿಲ್ಲ ಹಾಗೂ ಆರೋಪ ಮಾಡಿರುವುದಿಲ್ಲ, ವಿಶೇಷ ಭೂಸ್ವಾಧೀನಾಧಿಕಾರಿಗಳ ಕಛೇರಿಯ ಅಧಿಕಾರಿ ಹಾಗೂ ಸಿಬ್ಬಂದಿಗಳ ಮೇಲೆ ಸಂಶಯ ವ್ಯಕ್ತ ಪಡಿಸಿರುತ್ತಾರೆ. ಈ ಪ್ರಕರಣದಲ್ಲಿ ಸಂಪೂರ್ಣ ತನಿಖೆಯಿಂದ ಶಾಮೀಲಾಗಿರುವ ಅಧಿಕಾರಿಗಳು, ಸಿಬ್ಬಂದಿಗಳು, ಫಲಾನುಭವಿಗಳನ್ನು ಪತ್ತೆ ಮಾಡಬೇಕಾಗಿರುತ್ತದೆ.
ಈ)	ಹಾಗಿದ್ದಲ್ಲಿ, ಹಾಸನದ ಭೂಸ್ವಾಧೀನಾಧಿಕಾರಿಗಳ ಕಛೇರಿಯಲ್ಲಿ ಅನಧಿಕೃತವಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಅಧಿಕಾರಿಗಳ ಸಹಿಯನ್ನು ನಕಲಿ ಮಾಡಿ ಸರ್ಕಾರಕ್ಕೆ ಮೋಸ ಮಾಡಿ ಸರ್ಕಾರದ ಸಾವಿರಾರು ಎಕರೆ ಭೂ ಸಂತ್ರಸ್ಥರ ಜಮೀನುಗಳನ್ನು ಅಕ್ರಮವಾಗಿ ಮತ್ತು ಕಾನೂನು ಬಾಹಿರವಾಗಿ ಹಂಚಿಕೆ ಮಾಡಿರುವ ಮೇಲ್ಕಂಡ ಅಧಿಕಾರಿಗಳ ವಿರುದ್ಧ ಹಾಸನದ ನಗರ ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್. ದಾಖಲಿಸುವ ಬಗ್ಗೆ ಗೃಹ ಇಲಾಖೆಯಿಂದ ಕೈಗೊಂಡ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು)	ಪೂರ್ಣ ಪ್ರಮಾಣದಲ್ಲಿ ಕಡತಗಳನ್ನು ಕ್ರಮಬದ್ಧವಾಗಿ ಪರಿಶೀಲಿಸಿದ ನಂತರ ದಾಖಲಾತಿಗಳ ಸಾಕ್ಷ್ಯಾಧಾರಗಳಿಂದ ಆರೋಪಿತರು ಯಾರೆಂಬುದು ತನಿಖೆಯಿಂದ ಹೊರಹೊಮ್ಮಬೇಕಾಗಿದೆ. ಪ್ರಕರಣದ ತನಿಖೆಯು ಪ್ರಗತಿಯಲ್ಲಿರುತ್ತದೆ.

ಸಂಖ್ಯೆ: ಕಂಇ 7 ವಿಕೋವಿ 2020

(ಆರ್. ಅಶೋಕ)
ಕಂದಾಯ ಸಚಿವರು.

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 61 ಬೆಂಭೂಸ್ವಾ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ, 4ನೇ ಮಹಡಿ,
ಬೆಂಗಳೂರು, ದಿನಾಂಕ:17.03.2020

164
17/3/2020

ಇವರಿಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ವಿಕಾಸ ಸೌಧ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಕರ್ನಾಟಕ ವಿಧಾನ ಸಭೆಯ ಮಾನ್ಯ ಸದಸ್ಯರಾದ ಡಾ॥ ಶ್ರೀನಿವಾಸಮೂರ್ತಿ.ಕೆ. (ನೆಲಮಂಗಲ) ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2183 ಕ್ಕೆ ಉತ್ತರವನ್ನು ಕಳುಹಿಸಿಕೊಡುವ ಬಗ್ಗೆ.

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭೆಯ ಮಾನ್ಯ ಸದಸ್ಯರಾದ ಡಾ॥ ಶ್ರೀನಿವಾಸ ಮೂರ್ತಿ.ಕೆ. (ನೆಲಮಂಗಲ) ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2183 ಕ್ಕೆ ಸಂಬಂಧಿಸಿದಂತೆ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಾನು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

17/03/2020

ಸರ್ಕಾರದ ಅಧೀನ ಕಾರ್ಯದರ್ಶಿ ಪರವಾಗಿ
ನಗರಾಭಿವೃದ್ಧಿ ಇಲಾಖೆ.

17/3

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2183

ಸದಸ್ಯರ ಹೆಸರು : ಡಾ॥ ಶ್ರೀನಿವಾಸಮೂರ್ತಿ ಕೆ., (ನೆಲಮಂಗಲ)

ಉತ್ತರಿಸಬೇಕಾದ ದಿನಾಂಕ : 17.03.2020

ಉತ್ತರಿಸಬೇಕಾದ ಸಚಿವರು : ಮಾನ್ಯ ಮುಖ್ಯಮಂತ್ರಿರವರು

ಕ್ರಸಂ	ಪ್ರಶ್ನೆ	ಉತ್ತರ
ಅ)	ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಪ್ರಾರಂಭವಾದ ದಿನದಿಂದ ಇಲ್ಲಿಯವರೆಗೆ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಹೊರಪ್ರದೇಶಗಳಲ್ಲಿ ಬಡಾವಣೆಗಳನ್ನು ನಿರ್ಮಿಸಲು ಎಷ್ಟು ಎಕರೆ ಜಮೀನುಗಳನ್ನು ಭೂಸ್ವಾಧಿನಪಡಿಸಿಕೊಳ್ಳಲಾಗಿದೆ; ಹಾಗೂ ಈವರೆಗೆ ಎಷ್ಟು ನಿವೇಶನಗಳನ್ನು ಹಂಚಿಕೆ ಮಾಡಲಾಗಿರುತ್ತದೆ (ಬಡಾವಣೆಗಳ ಹೆಸರು ಸಹಿತ ಸಂಪೂರ್ಣ ಮಾಹಿತಿ ನೀಡುವುದು)	ಬೆಂಗಳೂರು ನಗರ ಅಭಿವೃದ್ಧಿ ಪ್ರಾಧಿಕಾರ ಪ್ರಾರಂಭವಾದ ದಿನದಿಂದ ಇಲ್ಲಿಯವರೆಗೆ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಬಡಾವಣೆಗಳನ್ನು ನಿರ್ಮಿಸಲು ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಂಡಿರುವ ವಿವರಗಳನ್ನು ಅನುಬಂಧ-1 ರಲ್ಲಿ ವಿವರಿಸಲಾಗಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಪ್ರಾರಂಭವಾದ ದಿನದಿಂದ ಇಲ್ಲಿಯವರೆಗೆ ಒಟ್ಟು 120848 ನಿವೇಶನಗಳನ್ನು ರಚಿಸಲಾಗಿದೆ. ವಿವರಗಳನ್ನು ಅನುಬಂಧ-2 ರಲ್ಲಿ ವಿವರಿಸಲಾಗಿದೆ.
ಆ)	ಪ್ರಾಧಿಕಾರವು ಇಲ್ಲಿಯವರೆಗೆ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಹಾಗೂ ಹೊರ ಪ್ರದೇಶಗಳಲ್ಲಿ ಬಡಾವಣೆಗಳನ್ನು ನಿರ್ಮಿಸಲು ಎಷ್ಟು ಹಣವನ್ನು ಖರ್ಚು ಮಾಡಲಾಗಿರುತ್ತದೆ; ಇದರಿಂದ ಸರ್ಕಾರಕ್ಕೆ ಬಂದಿರುವ ಆದಾಯವೆಷ್ಟು; (ಬಡಾವಣೆಗಳ ಹೆಸರು ಸಹಿತ ಸಂಪೂರ್ಣ ಮಾಹಿತಿ ನೀಡುವುದು)	1. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ನಿರ್ಮಿಸಲಾಗಿರುವ ಬಡಾವಣೆಗಳಿಗೆ 1980-81 ರಿಂದ 2019-20 (ಫೆಬ್ರವರಿ 2020) ರವರೆಗೆ ಒಟ್ಟು ರೂ.4870.35 ಕೋಟಿಗಳ ವೆಚ್ಚವನ್ನು ಭರಿಸಲಾಗಿದೆ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ನಿರ್ಮಿಸಲಾಗಿರುವ ಬಡಾವಣೆಗಳಿಂದ 1980-81 ರಿಂದ 2019-20 (ಫೆಬ್ರವರಿ 2020) ರವರೆಗೆ ಒಟ್ಟು ರೂ.3928.84 ಕೋಟಿಗಳ ಆದಾಯ ಬಂದಿರುತ್ತದೆ. ವಿವರಗಳನ್ನು ಅನುಬಂಧ-3ರಲ್ಲಿ ನೀಡಲಾಗಿದೆ. 2. 1988 ರಿಂದ 2019-20 (ಫೆಬ್ರವರಿ 2020) ರವರೆಗೆ ವಿವಿಧ ಬಡಾವಣೆಗಳಲ್ಲಿನ ಮೂಲೆ ನಿವೇಶನಗಳ ಹರಾಜಿನಿಂದ ಒಟ್ಟು ರೂ.3844.60 ಕೋಟಿಗಳಷ್ಟು ಆದಾಯ ಪ್ರಾಧಿಕಾರಕ್ಕೆ ಬಂದಿರುತ್ತದೆ. ವಿವರಗಳನ್ನು ಅನುಬಂಧ-4ರಲ್ಲಿ ನೀಡಲಾಗಿದೆ. 3. 1980-81 ರಿಂದ 2019-2020 (ಫೆಬ್ರವರಿ 2020) ರವರೆಗೆ ನಾಗರೀಕ ಸೌಲಭ್ಯ ನಿವೇಶನಗಳ ಗುತ್ತಿಗೆ ಆಧಾರದಲ್ಲಿ ಹಂಚಿಕೆಯಿಂದ ಪ್ರಾಧಿಕಾರಕ್ಕೆ ರೂ.439.69 ಕೋಟಿಗಳಷ್ಟು ಆದಾಯ ಬಂದಿರುತ್ತದೆ. ವಿವರಗಳನ್ನು ಅನುಬಂಧ-5ರಲ್ಲಿ ನೀಡಲಾಗಿದೆ.

ಇ)	ಕಳೆದ ಮೂರು ವರ್ಷಗಳಲ್ಲಿ ಸದರಿ ಪ್ರಾಧಿಕಾರದ ಅಭಿವೃದ್ಧಿ ವ್ಯಾಪ್ತಿಯಲ್ಲಿ ಬಂದಿರುವ ಲಾಭ ನಷ್ಟವೆಷ್ಟು; ಯಾವ ಕಾರಣಕ್ಕಾಗಿ ನಷ್ಟವುಂಟಾಗಿದೆ? (ಸಂಪೂರ್ಣ ಮಾಹಿತಿ ನೀಡುವುದು)	2016-17 ರಿಂದ 2018-19ರ ಸಾಲುಗಳ ಆದಾಯ ಮತ್ತು ವೆಚ್ಚದ ವಿವರಗಳು ಕೆಳಕಂಡಂತಿವೆ. ರೂ.ಕೋಟಿಗಳಲ್ಲಿ

ಕ್ರ ಸಂ	ವರ್ಷ	ಆದಾಯ	ವೆಚ್ಚ	ಆದಾಯ / ಕೊರತೆ
1	2016-17	933.90	942.28	(8.38)
2	2017-18	1405.75	1280.91	124.84
3	2018-19	1982.18	1783.54	198.64

2016-17ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಪ್ರಮುಖವಾಗಿ ಮೇಲುಸೇತುವೆಗಳು/ಕೆಳಸೇತುವೆಗಳು/ರಸ್ತೆ ವಿಭಜಕಗಳ ಕಾಮಗಾರಿಗಳಿಗಾಗಿ ರೂ.117.73 ಕೋಟಿಗಳ ವೆಚ್ಚವನ್ನು ಪ್ರಾಧಿಕಾರದ ಸಂಪನ್ಮೂಲಗಳಿಂದ ಭರಿಸಲಾಗಿದ್ದು ಈ ಕಾಮಗಾರಿಗಳಿಗೆ 2015-16ನೇ ಸಾಲಿನಲ್ಲಿ ರೂ.54.07 ಕೋಟಿಗಳ ವೆಚ್ಚವನ್ನು ಭರಿಸಲಾಗಿತ್ತು. ಈ ಕಾರಣದಿಂದ 2016-17ನೇ ಸಾಲಿನಲ್ಲಿ ರೂ.8.38 ಕೋಟಿಗಳ ಕೊರತೆ ಉಂಟಾಗಿರುತ್ತದೆ ವಿವರವನ್ನು ಅನುಬಂಧ-6 ರಲ್ಲಿ ನೀಡಲಾಗಿದೆ.

ಸಂಖ್ಯೆ: ನಅಇ 61 ಬೆಂಭೂಸ್ವಾ 2020

ಬಿ.ಎಸ್. ಯಡಿಯೂರಪ್ಪ
(ಬಿ.ಎಸ್ ಯಡಿಯೂರಪ್ಪ)
ಮುಖ್ಯಮಂತ್ರಿ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಿರ್ಮಿಸಿಲಾಗಿರುವ ಬಡಾವಣೆಗಳ ವಿವರ

ಅನುಬಂಧ – 1

ಕ್ರಸಂ.	ಬಡಾವಣೆಗಳ ಹೆಸರು	ಅಂತಿಮ ಅಧಿಸೂಚನೆ ವಿಸ್ತೀರ್ಣ	
		ಎ	ಗು
ಎಲ್.ಎ.ಓ.			
1	ಸಜ್ಜೆಪಾಳ್ಯ	160	0
2	ಚಂದ್ರಾಲೇಔಟ್	646	11
3	ಮಹಾಲಕ್ಷ್ಮಿ ಬಡಾವಣೆ (ನಂದಿನಿ)	786	10
4	ಸಗಟು ಉಕ್ಕು ಮಾರುಕಟ್ಟೆ ಸ್ಥಳಾಂತರ ಯೋಜನೆ	181	20
5	ಬಿ.ಟಿ.ಎಂ. ಬಡಾವಣೆ	1703	10
6	ಸಾರಕ್ಕಿ ಬಡಾವಣೆ ಮಧ್ಯೆ ಕನಕಪುರ ರಸ್ತೆ & ಬನ್ನೇರುಘಟ್ಟ ರಸ್ತೆ	741	21
7	ಅರ್ಕಾವತಿ ಬಡಾವಣೆ	2750	0
8	ಸರ್.ಎಂ.ವಿಶ್ವೇಶ್ವರಯ್ಯ ಮುಂದುವರೆದ ಬಡಾವಣೆ	510	0
9	ಡಾ. ಕೆ. ಶಿವರಾಮ ಕಾರಂತ ಬಡಾವಣೆ	3546	12
		11025	4
ಎ.ಎಲ್.ಎ.ಓ.			
1	ಆರ್.ಎಂ.ವಿ. 2ನೇ ಹಂತದ ಬಡಾವಣೆ	1331	4
2	ಮುಂದುವರೆದ ಆರ್.ಎಂ.ವಿ. 2ನೇ ಹಂತದ ಬಡಾವಣೆ	108	17
3	ಹೆಚ್.ಬಿ.ಆರ್. 1ನೇ ಬಡಾವಣೆ,	872	28
4	ಹೆಚ್.ಬಿ.ಆರ್. 2ನೇ ಬಡಾವಣೆ,	1179	39
5	ಹೆಚ್.ಬಿ.ಆರ್. 3ನೇ ಬಡಾವಣೆ,	433	32
6	ಹೆಚ್.ಆರ್.ಬಿ.ಆರ್. ಬಡಾವಣೆ	1129	2
7	ಮುಂದುವರೆದ ಹೆಚ್.ಆರ್.ಬಿ.ಆರ್. ಬಡಾವಣೆ	113	36
8	ಮಠದಹಳ್ಳಿ ಬಡಾವಣೆ	192	37
9	ಮುಂದುವರೆದ ಮಠದಹಳ್ಳಿ ಬಡಾವಣೆ	43	6
10	ವೆಸ್ಟ್ ಆಫ್ ಕಾರ್ಡ್ ರಸ್ತೆ 1ನೇ ಹಂತ	147	25
11	ಪಿಳ್ಳಣ್ಣ ಗಾರ್ಡನ್ 2ನೇ ಹಂತದ ಬಡಾವಣೆ,	24	2
12	ಪಿಳ್ಳಣ್ಣ ಗಾರ್ಡನ್ 3ನೇ ಹಂತದ ಬಡಾವಣೆ,	92	19
13	ಜ್ಞಾನಭಾರತಿ ಬಡಾವಣೆ	702	37
14	ಬಿ.ಟಿ.ಎಂ. 4ನೇ ಹಂತದ ಬಡಾವಣೆ	241	6

ಕ್ರ.ಸಂ.	ಬಡಾವಣೆಗಳ ಹೆಸರು	ಅಂತಿಮ ಅಧಿಸೂಚನೆ ವಿಸ್ತೀರ್ಣ	
15	ಬಿ.ಟಿ.ಎಂ. 6ನೇ ಹಂತದ ಬಡಾವಣೆ	562	34
16	ಮಿನಿ ಫಾರಸ್ಟ್	14	22
17	ವೆಂಕಟೇಶ್ವರ ಬಡಾವಣೆ	137	8
18	ಸರ್.ಎಂ. ವಿಶ್ವೇಶ್ವರಯ್ಯ ಬಡಾವಣೆ	1337	22
19	ನಾಡಪ್ರಭು ಕೆಂಪೇಗೌಡ ಬಡಾವಣೆ	4043	27
		12709	**3**
ಎಸ್.ಎಲ್.ಎ.ಓ.			
1	ಬನಶಂಕರಿ 2ನೇ ಹಂತ	583	23
2	ಬನಶಂಕರಿ 3ನೇ ಹಂತ	1321	20
3	ಬನಶಂಕರಿ 4ನೇ ಹಂತ	364	2
4	ಬನಶಂಕರಿ 5ನೇ ಹಂತ	1458	21
5	ಬನಶಂಕರಿ 6ನೇ ಹಂತ	160	17
6	ಬನಶಂಕರಿ 6ನೇ ಹಂತ ಮುಂದುವರೆದ ಬಡಾವಣೆ	750	0
7	ನಾಗಬಾವಿ 1ನೇ ಹಂತ	520	16
8	ನಾಗಬಾವಿ 2ನೇ ಹಂತ	604	23
9	ಅಂಬೇಡ್ಕರ್ ಬಡಾವಣೆ	176	2
10	ಕುಮಾರಸ್ವಾಮಿ ಬಡಾವಣೆ	274	26
11	ಕಾಮಾಕ್ಷಿಪಾಳ್ಯ ಬಡಾವಣೆ	520	24
12	ಜಯನಗರ ಬಡಾವಣೆ	39	30
13	ಎಂ.ಆರ್.ಸಿ.ಆರ್. ಬಡಾವಣೆ	274	9
14	ಪಶ್ಚಿಮ ಕಾರ್ಡ್ ರಸ್ತೆ 1ನೇ ಹಂತ	147	25
15	ಪಶ್ಚಿಮ ಕಾರ್ಡ್ ರಸ್ತೆ 2ನೇ ಹಂತ	228	38
16	ಪಶ್ಚಿಮ ಕಾರ್ಡ್ ರಸ್ತೆ 3ನೇ ಹಂತ	280	20
17	ಪಶ್ಚಿಮ ಕಾರ್ಡ್ ರಸ್ತೆ 4ನೇ ಹಂತ	242	26
18	ಜೆ.ಪಿ.ನಗರ 9ನೇ ಫೇಸ್	1111	36
19	ಅಚಿಜನಾಪುರ ಟೌನ್‌ಶಿಪ್ ಬಡಾವಣೆ	507	3
20	ಕೆಂಗೇರಿ ಸ್ಯಾಟ್ಲೈಟ್ ಟೌನ್	267	31
		9834	**32**

ಕ್ರ.ಸಂ.	ಬಡಾವಣೆಗಳ ಹೆಸರು	ಅಂತಿಮ ಅಧಿಸೂಚನೆ ವಿಸ್ತೀರ್ಣ	
ಎಸ್.ಎ.ಎಲ್.ಎ.ಒ.			
1	ಹೆಚ್.ಎ.ಎಲ್. 2ನೇ ಹಂತ	429	2
2	ಕೋರಮಂಗಲ	986	34
3	ಹೆಚ್.ಎ.ಎಲ್. 3ನೇ ಹಂತ	453	23
4	ಓ.ಎಂ.ಬಿ.ಆರ್.	341	7
5	ಈಸ್ಟ್ ಆಫ್ ಎನ್.ಜಿ.ಇ.ಎಫ್.	523	3
6	ಶಿನಿವಾಗಿಲು ಟ್ಯಾಂಕ್ ಬೆಡ್ ಅಂಡ್ ಸರೌಂಡಿಗ್ಸ್	293	12
7	ಮುಂದುವರೆದ ಈಸ್ಟ್ ಆಫ್ ಎನ್.ಜಿ.ಇ.ಎಫ್.	65	10
8	ಜೆ.ಪಿ.ನಗರ 8ನೇ ಹಂತ	974	8
9	ಹೆಚ್.ಎಸ್.ಆರ್.	1664	21
10	ಮುಂದುವರೆದ ಅಂಜನಾಪುರ ಬಡಾವಣೆ	487	0
11	ಅಕ್ಕಿತಿಮ್ಮನಹಳ್ಳಿ	65	39
12	ಮುಂದುವರೆದ ಜಯನಗರ 9ನೇ ಬ್ಲಾಕ್	33	6
13	ಮುಂದುವರೆದ ಓ.ಎಂ.ಬಿ.ಆರ್.	3	11
14	ದೊಮ್ಮಲೂರು	135	6
		6455	**22**
	ಒಟ್ಟು	**40024**	**21**

ಭೂಸ್ವಾಧೀನಾಧಿಕಾರಿಗಳು,
ಬೆಂ.ಅ.ಪ್ರಾ., ಬೆಂಗಳೂರು.

ಅಪರ ಭೂಸ್ವಾಧೀನಾಧಿಕಾರಿಗಳು,
ಬೆಂ.ಅ.ಪ್ರಾ., ಬೆಂಗಳೂರು.

ವಿಶೇಷ ಭೂಸ್ವಾಧೀನಾಧಿಕಾರಿಗಳು,
ಬೆಂ.ಅ.ಪ್ರಾ., ಬೆಂಗಳೂರು.

ವಿಶೇಷ ಅಪರ ಭೂಸ್ವಾಧೀನಾಧಿಕಾರಿಗಳು,
ಬೆಂ.ಅ.ಪ್ರಾ., ಬೆಂಗಳೂರು.

(ಅನುಬಂಧ-೨)

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ.ಶ್ರೀನಿವಾಸಮೂರ್ತಿ ಕೆ.ಡಾ.(ನೆಲಮಂಗಲ) ವಿಧಾನ ಸಭೆಯ ಚುಕ್ಕೆ ಗುರುತಿನ/ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ-2183 ಕ್ಕೆ ಉತ್ತರಗಳು

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಿವೇಶನಗಳನ್ನು ರಚಿಸಿ ಹಂಚಿಕೆ ಮಾಡಲಾದ ವಿವರಗಳು

ಕ್ರಮ ಸಂಖ್ಯೆ	ಬಡಾವಣೆ ಹೆಸರು	ಒಟ್ಟು ರಚಿಸಿದ ನಿವೇಶನಗಳ ಸಂಖ್ಯೆ	ಹಂಚಿಕೆ ಮಾಡಿರುವ ನಿವೇಶನಗಳು
1	ಇಂಡಸ್ಟ್ರೀಯಲ್ ಸಬ್‌ಹರ್ಬ್ 2ನೇ ಹಂತ	300	240
2	ಬಿನ್ನಮಂಗಲ	1576	1576
3	ಮುಂದುವರೆದ ಮಠದಹಳ್ಳಿ	412	376
4	ಬಿ.ಟಿ.ಎಂ.ಬಡಾವಣೆ 1 ಮತ್ತು 2ನೇ ಹಂತ	3247	3195
5	ಹೆಚ್.ಎ.ಎಲ್.2ನೇ ಹಂತ	4527	2274
6	ಹೆಚ್.ಎ.ಎಲ್.3ನೇ ಹಂತ	2696	1891
7	ಕೈಗಾರಿಕಾ ಕಾರ್ಮಿಕರ ಬಡಾವಣೆ	240	118
8	ನಂದಿನಿ ಬಡಾವಣೆ	6551	873
9	ಕುಮಾರಸ್ವಾಮಿ ಬಡಾವಣೆ 1ನೇ ಹಂತ	4432	4188
10	ಮುಂದುವರೆದ ಮಹಾಲಕ್ಷ್ಮೀ ಬಡಾವಣೆ	169	169
11	ಆರ್.ಪಿ.ಸಿ.ಬಡಾವಣೆ	2695	2600
12	ಅಂಬೇಡ್ಕರ್ ಬಡಾವಣೆ	65	0
13	ಕೈಗಾರಿಕಾ ನಗರ ರಾಜಾಜಿನಗರ	157	156
14	ಲಿಂಗರಾಜಪುರ	1800	1665
15	ಹೆಚ್.ಆರ್.ಬಿ.ಆರ್.ಬಡಾವಣೆ	4740	3747
16	ಹೆಚ್.ಬಿ.ಆರ್.1ನೇ ಹಂತ	4305	3169
17	ಹೆಚ್.ಬಿ.ಆರ್.2ನೇ ಹಂತ	847	350
18	ಆರ್.ಎಂ.ವಿ.2ನೇ ಹಂತ	1908	1704
19	ಭೂಪಸಂದ್ರ ಮುಂದುವರೆದ ಬಡಾವಣೆಯ ಆರ್.ಎಂ.ವಿ.2ನೇ ಹಂತ	302	
20	ಹೆಚ್.ಎಸ್.ಆರ್.ಬಡಾವಣೆ	9068	8992
21	ಈಸ್ಟ್ ಆಫ್ ಎನ್.ಜಿ.ಇ.ಎಫ್.ಬಡಾವಣೆ	2300	2195
22	ನಾಗರಬಾವಿ 1ನೇ ಹಂತ	1344	410
23	ಚಂದ್ರಾ ಬಡಾವಣೆ	269	177
24	ಚಂದ್ರಾ ಬಡಾವಣೆ 1ನೇ ಹಂತ, 2 ಮತ್ತು 3ನೇ ಹಂತ	1280	1274
25	ನಾಗರಬಾವಿ 2ನೇ ಹಂತ	5001	4900
26	ಒ.ಎಂ.ಬಿ.ಆರ್.ಬಡಾವಣೆ	2560	2473
27	ಮುಂದುವರೆದ ಒ.ಎಂ.ಬಿ.ಆರ್.ಬಡಾವಣೆ	18	
28	ಎಸ್.ಟಿ.ಬೆಡ್	469	443
29	ಜ್ಞಾನಭಾರತಿ (ನಾಗದೇವನಹಳ್ಳಿ)	1564	1193
30	ಜ್ಞಾನಭಾರತಿ (ವಲಗೇರಹಳ್ಳಿ)	1973	1227
31	ಬಿ.ಟಿ.ಎಂ.ಬಡಾವಣೆ 4ನೇ ಹಂತ	1224	860

ಕ್ರಮ ಸಂಖ್ಯೆ	ಬಡಾವಣೆ ಹೆಸರು	ಒಟ್ಟು ರಚಿಸಿದ ನಿವೇಶನಗಳ ಸಂಖ್ಯೆ	ಹಂಚಿಕೆ ಮಾಡಿರುವ ನಿವೇಶನಗಳು
32	ಬಿ.ಟಿ.ಎಂ.ಬಡಾವಣೆ 6ನೇ ಹಂತ (ಹುಳಿಮಾವು / ಅರಕೆರೆ)	958	494
33	ಕಾಡುಬೀಸನಹಳ್ಳಿ	23	23
34	ಜೆ.ಪಿ.ನಗರ 8ನೇ ಹಂತ	2677	1781
35	ಜೆ.ಪಿ.ನಗರ 9ನೇ ಹಂತ	3078	1971
36	ಬನಶಂಕರಿ 5ನೇ ಹಂತ	1346	1206
37	ಅಂಜನಾಪುರ ಬಡಾವಣೆ	6654	5855
38	ಬನಶಂಕರಿ 6ನೇ ಹಂತ	23890	18853
39	ಸರ್.ಎಂ.ವಿ.ಬಡಾವಣೆ 1 ಮತ್ತು 6ನೇ ಬ್ಲಾಕ್	16379	14940
40	ಸರ್.ಎಂ.ವಿ.ಬಡಾವಣೆ 7 ಮತ್ತು 9ನೇ ಬ್ಲಾಕ್	4818	
41	ಮುಂದುವರೆದ ಅಂಜನಾಪುರ ಬಡಾವಣೆ	5227	4477
42	ಅರ್ಕಾವತಿ ಬಡಾವಣೆ	8813	8813
43	ನಾಡಪ್ರಭು ಕೆಂಪೇಗೌಡ 1ನೇ ಹಂತ	5000	5000
44	ನಾಡಪ್ರಭು ಕೆಂಪೇಗೌಡ 2ನೇ ಹಂತ	5000	5000
	ಒಟ್ಟು	**151902**	**120848**

for ಉಪಕಾರ್ಯದರ್ಶಿ–1
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ,
ಬೆಂಗಳೂರು

ಅನುಬಂಧ-3

Statement showing layout wise receipts and expenditure inrespect of layouts formed by BDA for the period from 1980-81 to 2019-20 (February 2020) (excluding Sale of sites by Auction and CA Sites allotment)

Sl No	Layout	Total receipts	Total Expenditure
			Rs. in lakhs
	NORTH DIVISION		
1	Further extn of Matadahalli	428.80	187.05
2	Matadahalli layout	35.55	114.39
3	Pillanna Garden 2nd stage	8.41	6.95
4	Pillanna Garden 3rd stage	56.32	102.51
5	RMV 2nd stage	3,948.92	1,546.00
6	HBR 1st stage	4,899.47	6,383.00
7	HBR 2nd stage	832.59	765.77
8	HBR 3rd stage	107.81	166.66
9	OMBR layout	2,368.51	896.57
10	HRBR	4,882.85	2,518.61
11	East of NGEF	2,285.02	1,785.97
12	Arkavathi Layout	21,071.00	34,546.00
	SOUTH DIVISION	-	-
1	Sarakki	2,931.90	1,165.76
2	BSK I stage	13.39	77.22
3	BSK II stage	776.06	485.50
4	BSK III Stage	6,232.85	2,747.37
5	BSK IVStage	3.39	38.51
6	BSK V Stage	1,958.14	1,805.77
7	BSK VI Stage	27,370.26	50,878.76
8	BSK VI Stage fur extn	12,232.00	17,059.00
9	Kumaraswamy layout 1st stage	657.10	427.67
10	Kumaraswamy layout 2nd stage	1,440.42	534.73
11	BTM Layout 1st stage	462.78	1,202.54
12	BTM Layout 2nd stage	2,763.81	958.38
13	BTM Layout 3rd stage	472.23	58.64
14	BTM Layout 4th stage	1,432.47	2,461.00
15	BTM Layout 6th stage	506.58	1,889.31
16	Jayanagar I-IX Block	10.45	139.97
17	JP Nagar 7th phase	169.25	16.50
18	JP Nagar 8th phase	3,252.83	4,510.59
19	JP Nagar 9th phase	2,787.66	5,277.49
20	Anjanapura Layout	12,113.00	12,235.00
21	Anjanapura Layout Fur Extn	4,744.00	9,467.00

Statement showing layout wise receipts and expenditure inrespect of layouts formed by BDA for the period from 1980-81 to 2019-20 (February 2020) (excluding Sale of sites by Auction and CA Sites allotment)

Sl No	Layout	Total receipts	Total Expenditure
			Rs. in lakhs
	EAST DIVISION	-	-
1	Binmangala Ist & 2nd stage	5.65	107.73
2	HAL 2nd stage	1,112.84	686.22
3	HAL 3rd stage	2,589.39	878.79
4	Austin town	506.11	112.59
5	Domlur 1st stage	56.00	38.54
6	Domlur 2nd stage	1,036.05	626.22
7	Koramangala	3,545.67	1,071.25
8	Akkithimmanahalli	1.99	15.54
9	Futher extn of Sonnenahalli	1.06	17.40
10	HSR Layout	15,047.71	16,380.07
11	Shinivagilu tank layout	483.36	266.42
	WEST DIVISION	-	-
1	Kengeri satellite town	463.27	904.32
2	Railway line pipeline	335.71	137.48
3	West of chord road 2nd stage	120.49	227.57
4	West of chord road 3rd stage	739.11	444.46
5	West of chord road 4th stage	181.08	133.23
6	Chandra layout	1,344.60	797.47
7	Further Extn of Mahalaxmi layout	1,658.89	171.55
8	Industrial workers layout	93.41	96.78
9	Magadi road chord road layout	1.09	65.89
10	West of chord road 1st stage	21.89	324.92
11	Industrial suburb 1st & 2nd stage	94.81	390.25
12	Nandini layout	1,291.24	1,603.62
13	Kamakshi layout	1.38	87.85
14	Nagarbhavi 1st stage	365.94	1,318.82
15	Nagarbhavi 2nd stage	3,966.22	16,745.24
16	Jagajeevanram Layout (Dr. B R Ambedkar L/o)	13.18	108.14
17	RPC Layout	9.09	12.81
18	Gnana bharathi layout	4,164.00	6,911.00
19	Sir M V Layout	28,634.00	65,433.00
20	Sir M V Layout Fur Extn	8,746.00	17,787.00
	NPKL Division	-	-
1	Nadaprabhu Kempegowda Layout	1,92,997.00	1,90,677.00
	Total:	3,92,884.05	4,87,035.36

Rs: 3928.84 Crore Rs:4870.35 Crore

Chief Accounts Officer
Bangalore Development Authority
Bangalore - 560020

FINANCE MEMBER
Bangalore Development Authority
Bangalore-560 020

Statement showing the Realisation Through Auction / E-Auction of Sites from 1988 to till date

Sl. No	Year	Total Sites sold in auction	Total Amount	Total Amount (Rs. In Crores)
1	Aug 1988 to March 1989	555	15,10,33,722.00	15.10
2	1989-1990	734	26,83,34,788.00	26.83
3	1990-1991	924	29,38,44,535.00	29.38
4	1991-1992	647	22,97,41,034.00	22.97
5	1992-1993	496	20,23,24,418.00	20.23
6	1993-1994	291	11,05,18,563.00	11.05
7	1994-1995	272	19,33,07,657.00	19.33
8	1995-1996	171	17,35,14,831.00	17.35
9	1996-1997	294	29,24,50,613.00	29.25
10	1997-1998	113	13,29,33,330.00	13.29
11	1998-1999	140	13,64,60,557.00	13.65
12	1999-2000	116	10,72,67,002.00	10.73
13	2000-2001	354	64,57,16,161.00	64.57
14	2001-2002	401	52,82,98,891.00	52.83
15	2002-2003	332	63,76,01,957.00	63.76
16	2003-2004	276	97,19,88,847.00	97.20
17	2004-2005	417	1,22,67,74,220.00	122.68
18	2005-2006	431	1,61,44,25,304.00	161.44
19	2006-2007	352	1,92,17,08,200.00	192.17
20	2007-2008	455	3,17,30,23,268.00	317.30
21	2008-2009	163	1,21,55,65,095.00	121.56
22	2009-2010	40	42,69,61,862.00	42.70
23	2010-2011	87	93,35,02,973.00	93.35
24	2011-2012	177	1,87,65,10,505.00	187.65
25	2012-2013	209	2,06,13,22,326.00	206.13
26	2013-2014	423	5,13,45,18,982.00	513.45
27	2014-2015	167	1,70,18,00,194.00	170.18
28	2015-2016	131	1,31,62,24,368.00	131.62
29	2016-2017	122	1,61,94,65,969.00	161.95
30	2017-2018	353	4,07,38,12,449.00	407.38
31	2018-2019	332	3,59,92,32,922.00	359.92
32	2019-2020	98	1,47,58,36,997.00	147.58
	Total =	10073	38,44,60,22,540.00	3,844.60

Chief Accounts Officer
Bangalore Development Authority
BANGALORE

Finance Member
Bangalore Development Authority
Bangalore - 560 020

ಅನುಬಂಧ - 5

Statement showing the receipts from lease of CA sites		
		Rs. In lakhs
Sl.No.	Year	Amount
1	1980.81	3.75
2	1981-82	2.00
3	1982-83	3.79
4	1983-84	-
5	1984-85	-
6	1985-86	0.04
7	1986-87	9.85
8	1987-88	58.31
9	1988-89	10.25
10	1989-90	-
11	1990-91	-
12	1991-92	-
13	1992-93	15.71
14	1993-94	-
15	1994-95	-
16	1995-96	-
17	1996-97	-
18	1997-98	-
19	1998-99	585.98
20	1999-2000	280.30
21	2000-01	715.94
22	2001-02	645.30
23	2002-03	754.70
24	2003-04	874.91
25	2004-05	565.10
26	2005-06	925.14
27	2006-07	1,773.82
28	2007-08	3,541.02
29	2008-09	1,942.09
30	2009-10	1,246.08
31	2010-11	5,693.06
32	2011-12	5,520.02
33	2012-13	1,328.22
34	2013-14	1,198.64
35	2014-15	1,331.15
36	2015-16	1,197.55
37	2016-17	2,649.90
38	2017-18	4,009.78
39	2018-19	5,051.15
40	2019-20	2,035.55
	Total	43,969.10

Chief Accounts Officer
Bangalore Development Authority
BANGALORE

ಪ್ರಸಂಗಿಕ-೬

BANGALORE DEVELOPMENT AUTHORITY

INCOME AND EXPENDITURE ACCOUNT FOR THE PERIOD/YEAR FROM 2015 - 16 TO 2018 - 19

(Rs in Lakh)

INCOME	Year 2015 - 16	Year 2016 - 17	Year 2017 - 18	Year 2018-19
Income from Allotment of sites / Bulk sites / Auction sites / flats	36,174.05	78,220.23	1,13,319.50	1,76,257.74
Income from Taxes	2,795.59	3,427.29	4,204.63	4,643.08
Other Income	13,313.33	11,742.04	23,051.33	17,317.00
TOTAL (A)	**52,282.97**	**93,389.56**	**1,40,575.46**	**1,98,217.82**
EXPENDITURE				
Cost of Development sites / flats	23,338.85	61,949.71	1,01,398.62	1,51,682.63
Cost of Development works	14,064.77	20,259.37	13,409.12	9,242.87
Repairs and maintenance	2,382.94	1,901.26	3,016.41	5,183.91
Other Administrative Expenses etc.,	1,562.54	1,979.08	1,521.93	1,876.72
Establishment Expenses	3,794.99	3,653.14	3,102.63	4,076.52
Donation	442.71	33.00	10.00	100.00
Interest	1,124.67	3,199.79	4,794.39	4,517.70
Depreciation	613.82	951.23	674.29	618.99
TOTAL (B)	**47,325.29**	**93,926.58**	**1,27,927.39**	**1,77,299.34**
Balance being of Income over Expenditure (A-B)	**4,957.68**	**(537.02)**	**12,648.07**	**20,918.48**
Prior Period Adjustments	(440.26)	(301.54)	(163.69)	(1,054.50)
BALANCE BEING SURPLUS/(DEFICIT)CARRIED TO CORPUS/CAPITAL FUND	**4,517.42**	**(838.56)**	**12,484.38**	**19,863.98**

Chief Accounts Officer
Bangalore Development Authority
BANGALORE

Finance Member
Bangalore Development Authority
Bangalore - 560 020

ಕರ್ನಾಟಕ ಸರ್ಕಾರ

ಸಂಖ್ಯೆ: ಆಇ 165 ವೆಚ್ಚ-7/2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ
ಬೆಂಗಳೂರು, ದಿನಾಂಕ:17-03-2020

53
u.s
17/3/2020

ಇಂದ,

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಆರ್ಥಿಕ ಇಲಾಖೆ, ವಿಧಾನಸೌಧ,
ಬೆಂಗಳೂರು-01.

ಇವರಿಗೆ,

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ, ಬೆಂಗಳೂರು-01.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ (ಕಿತ್ತೂರು)ರವರು ಚುಕ್ಕೆ ಗುರುತಿಲ್ಲದ ಪ್ರಶ್ನೆ ಅಡಿಯಲ್ಲಿ ನೀಡಿರುವ ಸೂಚನೆಗೆ ಸರ್ಕಾರದ ಉತ್ತರ.

ಉಲ್ಲೇಖ: ಕರ್ನಾಟಕ ವಿಧಾನ ಸಭೆ ಸಂ. ಪ್ರಶಾವಿಸ/15ನೇವಿಸ/6ಅ/ಪ್ರ.ಸಂ.1687/2020, ದಿ:04.03.2020.

****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ತಮ್ಮ ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ (ಕಿತ್ತೂರು)ರವರು ಚುಕ್ಕೆ ಗುರುತಿಲ್ಲದ ಪ್ರಶ್ನೆಗೆ ಸರ್ಕಾರದ ಉತ್ತರದ 250 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿದೆ.

(ಧರ್ಮಪ್ಪ)
ಶಾಖಾಧಿಕಾರಿ
ಆರ್ಥಿಕ ಇಲಾಖೆ (ವೆಚ್ಚ-7)

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1687

ಸದಸ್ಯರ ಹೆಸರು : ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ (ಕಿತ್ತೂರು)

ಉತ್ತರಿಸಬೇಕಾದ ದಿನಾಂಕ : 17.03.2020

ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

ಪ್ರಶ್ನೆ	ಉತ್ತರ
ಅ) ಕಿತ್ತೂರು ಉತ್ಸವಕ್ಕೆ ಪ್ರತಿ ವರ್ಷ ನೀಡಲಾಗುವ ರೂ.30.00 ಲಕ್ಷ ಅನುದಾನವನ್ನು ರೂ.ಒಂದು ಕೋಟಿಗೆ ಹೆಚ್ಚಿಸಿ ಅಪೆಂಡಿಕ್ಸ್–ಬಿನಲ್ಲಿ ಸೇರಿಸುವ ಪ್ರಸ್ತಾವನೆಯು ಯಾವ ಹಂತದಲ್ಲಿದೆ;	ಅಪೆಂಡಿಕ್ಸ್–ಬಿ ಸರ್ಕಾರಿ ನೌಕರರ ವೇತನಕ್ಕೆ ಸಂಬಂಧಿಸಿರುತ್ತದೆ. ಕರ್ನಾಟಕ ರಾಜ್ಯದ ಎಲ್ಲಾ ಉತ್ಸವಗಳ ಆಚರಣೆಗಾಗಿ 2019–20ರ ಆಯವ್ಯಯದಲ್ಲಿ ರೂ.4843.49 ಲಕ್ಷಗಳನ್ನು ಒದಗಿಸಲಾಗಿದೆ. 2019–20ನೇ ಸಾಲಿನಲ್ಲಿ ಕಿತ್ತೂರು ಉತ್ಸವದ ಆಚರಣೆಗಾಗಿ ರೂ.100.00ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿದೆ
ಆ) ಯಾವ ಕಾಲಮಿತಿಯೊಳಗಾಗಿ ಸದರಿ ಪ್ರಸ್ತಾವನೆ ಕುರಿತು ಸರ್ಕಾರ ಕ್ರಮ ಕೈಗೊಳ್ಳುವುದು?	ರಾಜ್ಯದ ಎಲ್ಲಾ ಉತ್ಸವಗಳಿಗೆ ಆಡಳಿತ ಇಲಾಖೆಯು ಕ್ರಿಯಾ ಯೋಜನೆಯ ಮೂಲಕ ಉತ್ಸವಗಳನ್ನು ಪ್ರಾರಂಭಿಸುವ ಮುನ್ನ ಅನುದಾನ ನಿಗಧಿಪಡಿಸುತ್ತದೆ.

ಆಇ 165 ವೆಚ್ಚ–7/2020

(ಬಿ.ಎಸ್.ಯಡಿಯೂರಪ್ಪ)

ಮುಖ್ಯಮಂತ್ರಿ

ಕರ್ನಾಟಕ ಸರ್ಕಾರ

ಹೆಚ್‌ಡಿ 35 ಪಿಬಿಎ 2020

ಕರ್ನಾಟಕ ಸರ್ಕಾರ ಸಚಿವಾಲಯ
ವಿಧಾನ ಸೌಧ,
ಬೆಂಗಳೂರು, ದಿನಾಂಕ:16.03.2020.

ಇವರಿಂದ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಒಳಾಡಳಿತ ಇಲಾಖೆ,
ಬೆಂಗಳೂರು

ಇವರಿಗೆ,
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಅನಿಲ್ ಚಿಕ್ಕಮಾದು (ಹೆಚ್.ಡಿ.ಕೋಟೆ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2172ಗೆ ಉತ್ತರಿಸುವ ಕುರಿತು.

ಉಲ್ಲೇಖ: ಪತ್ರ ಸಂಖ್ಯೆ:ಪ್ರಶಾವಿಸ:15ನೇವಿಸ/6ಅ/ಪ್ರ.ಸಂ:2172/2020, ದಿ:05.03.2020.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಅನಿಲ್ ಚಿಕ್ಕಮಾದು (ಹೆಚ್.ಡಿ.ಕೋಟೆ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2172ರ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

16/3/2020

[ಬಿ.ಎನ್.ದೇವರಾಜ್]
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ(ಪೊಲೀಸ್‌ವೆಚ್ಚ).

ಕರ್ನಾಟಕ ವಿಧಾನಸಭೆ

1] ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **2172**
2] ಮಾನ್ಯ ಸದಸ್ಯರ ಹೆಸರು : ಶ್ರೀ ಅನಿಲ್ ಚಿಕ್ಕಮಾದು (ಹೆಚ್.ಡಿ.ಕೋಟೆ)
3] ಉತ್ತರಿಸುವ ದಿನಾಂಕ : 17.03.2020.
4] ಉತ್ತರಿಸುವ ಸಚಿವರು : ಗೃಹ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ಹೆಗ್ಗಡದೇವನಕೋಟೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಹೆಗ್ಗಡದೇವನಕೋಟೆ ಮತ್ತು ಸರಗೂರು ತಾಲ್ಲೂಕುಗಳಲ್ಲಿ ರಾಷ್ಟ್ರೀಯ ಹೆದ್ದಾರಿಗಳು ಹಾದು-ಹೋಗಿದ್ದು, ಸದರಿ ತಾಲ್ಲೂಕುಗಳಲ್ಲಿ ಸಂಚಾರಿ ಪೊಲೀಸ್ ಠಾಣೆಗಳಿಲ್ಲದೇ ವಾಹನ ಸವಾರರಿಗೆ, ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;	ಸರ್ಕಾರದ ಗಮನಕ್ಕೆ ಬಂದಿರುತ್ತದೆ.
ಆ)	ಸಂಚಾರಿ ಪೊಲೀಸ್ ಠಾಣೆ ತೆರೆಯುವ ಪ್ರಸ್ತಾವನೆಯು ಸರ್ಕಾರಕ್ಕೆ ಸಲ್ಲಿಕೆಯಾಗಿದೆಯೇ; ಹಾಗಿದ್ದಲ್ಲಿ, ಪ್ರಸ್ತಾವನೆಯು ಯಾವ ಹಂತದಲ್ಲಿದೆ; ಸರ್ಕಾರ ಕೈಗೊಂಡ ಕ್ರಮಗಳೇನು; ಯಾವ ಕಾಲಮಿತಿಯಲ್ಲಿ ಸಂಚಾರಿ ಪೊಲೀಸ್ ಠಾಣೆಗಳನ್ನು ತೆರೆಯಲಾಗುವುದು; (ವಿವರ ನೀಡುವುದು)	ಹೆಗ್ಗಡದೇವನಕೋಟೆ ಹಾಗೂ ಸರಗೂರು ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಸಂಚಾರಿ ಪೊಲೀಸ್ ಠಾಣೆಯನ್ನು ತೆರೆಯುವ ಪ್ರಸ್ತಾವನೆಯು ರಾಷ್ಟ್ರೀಯ ಪೊಲೀಸ್ ಆಯೋಗವು ನಿಗಧಿಪಡಿಸಿರುವ ಮಾನದಂಡಗಳನ್ನು ಪೂರೈಸಿರುವ ಬಗ್ಗೆ ನಿಯಮಾನುಸಾರ ಪರಿಶೀಲಿಸಲಾಗುವುದು.
ಇ)	ಪ್ರಸ್ತಾವನೆಯು ಸಲ್ಲಿಕೆಯಾಗದಿದ್ದಲ್ಲಿ, ಸದರಿ ಪೊಲೀಸ್ ಠಾಣೆಗಳನ್ನು ತೆರೆಯುವ ಬಗ್ಗೆ ಮುಂದಿನ ದಿನಗಳಲ್ಲಿ ಸರ್ಕಾರ ಕೈಗೊಳ್ಳುವ ಕ್ರಮಗಳೇನು? (ವಿವರ ನೀಡುವುದು)	

ಸಂಖ್ಯೆ:ಹೆಚ್‌ಡಿ 35 ಪಿಓಪಿ 2020

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು

ಕರ್ನಾಟಕ ಸರ್ಕಾರ

ಹೆಚ್‌ಡಿ 32 ಪಿಓಪಿ 2020

ಕರ್ನಾಟಕ ಸರ್ಕಾರ ಸಚಿವಾಲಯ
ವಿಧಾನ ಸೌಧ,
ಬೆಂಗಳೂರು, ದಿನಾಂಕ:16.03.2020.

ಇವರಿಂದ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಒಳಾಡಳಿತ ಇಲಾಖೆ,
ಬೆಂಗಳೂರು

ಇವರಿಗೆ,
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ,
ಬೆಂಗಳೂರು.

143
GTS
17/3/20

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಶಿವಾನಂದ ಪಾಟೀಲ್ (ಬಸವನಬಾಗೇವಾಡಿ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2144ಗೆ ಉತ್ತರಿಸುವ ಕುರಿತು.

ಉಲ್ಲೇಖ: ಪತ್ರ ಸಂಖ್ಯೆ:ಪ್ರಶಾವಿಸ:15ನೇವಿಸ/6ಅ/ಪ್ರ.ಸಂ:2144/2020, ದಿ:04.03.2020.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಶಿವಾನಂದ ಪಾಟೀಲ್ (ಬಸವನಬಾಗೇವಾಡಿ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2144ರ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

16/3/2020
[ಬಿ.ಎನ್.ದೇವರಾಜ್]
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ(ಪೊಲೀಸ್‌ವೆಚ್ಚ).

ಕರ್ನಾಟಕ ವಿಧಾನಸಭೆ

1]	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**2144**
2]	ಮಾನ್ಯ ಸದಸ್ಯರ ಹೆಸರು	:	ಶ್ರೀ ಶಿವಾನಂದ ಪಾಟೀಲ್ (ಬಸವನಬಾಗೇವಾಡಿ)
3]	ಉತ್ತರಿಸುವ ದಿನಾಂಕ	:	17.03.2020.
4]	ಉತ್ತರಿಸುವ ಸಚಿವರು	:	ಗೃಹ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಬಸವನಬಾಗೇವಾಡಿ ತಾಲ್ಲೂಕಿನ ಕೂಡಗಿ ಎನ್.ಟಿ.ಪಿ.ಸಿ. ಹತ್ತಿರ ಪೊಲೀಸ್ ಠಾಣೆಯನ್ನು ಯಾವ ವರ್ಷ ಪ್ರಾರಂಭ ಮಾಡಲಾಗಿದೆ;	ಕೂಡಗಿ ಎನ್.ಟಿ.ಪಿ.ಸಿ. ಪೊಲೀಸ್ ಠಾಣೆಯನ್ನು ದಿನಾಂಕ: 25.03.2019 ರಂದು ಪ್ರಾರಂಭಿಸಲಾಗಿರುತ್ತದೆ.
ಆ)	ಸದರಿ ಪೊಲೀಸ್ ಠಾಣೆಯು ಸ್ವಂತ ಜಮೀನು/ನಿವೇಶನ ಹೊಂದಿರುವುದೇ ;	ಹೊಂದಿರುವುದಿಲ್ಲ.
ಇ)	ಹಾಗಿಲ್ಲದಿದ್ದಲ್ಲಿ, ಸದರಿ ಪೊಲೀಸ್ ಠಾಣೆಗೆ ಅಗತ್ಯವಿರುವ ಠಾಣೆ ಕಟ್ಟಡ ಮತ್ತು ಸಿಬ್ಬಂದಿ ವಸತಿಗೃಹಗಳನ್ನು ನಿರ್ಮಿಸಲು ಅಗತ್ಯವಿರುವ ಜಮೀನು ಅಥವಾ ನಿವೇಶನ ಪಡೆಯಲು ಇದುವರೆಗೂ ಕೈಗೊಂಡಿರುವ ಕ್ರಮಗಳೇನು ;	ಕೂಡಗಿ ಎನ್.ಟಿ.ಪಿ.ಸಿ. ಪೊಲೀಸ್ ಠಾಣೆ ಕಟ್ಟಡ ಮತ್ತು ಸಿಬ್ಬಂದಿ ವಸತಿಗೃಹಗಳನ್ನು ನಿರ್ಮಿಸಲು ಅಗತ್ಯವಿರುವ ಜಮೀನನ್ನು ಪೂರೈಸುವ ಬಗ್ಗೆ ಡಿಜಿ ಮತ್ತು ಐಜಿಪಿ ರವರಿಂದ ಜನರಲ್ ಮ್ಯಾನೇಜರ್, ಎನ್.ಟಿ.ಪಿ.ಸಿ, ಕೂಡಗಿ ಇವರಿಗೆ ಪತ್ರ ವ್ಯವಹಾರ ಮಾಡಲಾಗಿದ್ದು, ಪ್ರಸ್ತಾವನೆಯು ಡಿಜಿ ಮತ್ತು ಐಜಿಪಿ ರವರ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ.
ಈ)	ಠಾಣೆಗೆ ಅವಶ್ಯಕ ಜಮೀನು/ನಿವೇಶನ ಪಡೆಯುವಲ್ಲಿ ಆಗುತ್ತಿರುವ ವಿಳಂಬಕ್ಕೆ ಕಾರಣಗಳೇನು?	

ಸಂಖ್ಯೆ:ಹೆಚ್‌ಡಿ 32 ಪಿಓಪಿ 2020

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು

ಹೆಚ್‌ಡಿ 30 ಪಿಓಪಿ 2020

<u>ಕರ್ನಾಟಕ ಸರ್ಕಾರ</u>

ಕರ್ನಾಟಕ ಸರ್ಕಾರ ಸಚಿವಾಲಯ
ವಿಧಾನ ಸೌಧ,
ಬೆಂಗಳೂರು, ದಿನಾಂಕ:16.03.2020.

ಇವರಿಂದ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಒಳಾಡಳಿತ ಇಲಾಖೆ,
ಬೆಂಗಳೂರು

ಇವರಿಗೆ,
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ,
ಬೆಂಗಳೂರು.

12
415
17/3/20

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಅಜಯ್ ಧರ್ಮಸಿಂಗ್ ಡಾ॥ (ಜೇವರ್ಗಿ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1216ಗೆ ಉತ್ತರಿಸುವ ಕುರಿತು.

ಉಲ್ಲೇಖ: ಪತ್ರ ಸಂಖ್ಯೆ:ಪ್ರಶಾವಿಸ:15ನೇವಿಸ/6ಅ/ಪ್ರ.ಸಂ:1216/2020, ದಿ:04.03.2020.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಅಜಯ್ ಧರ್ಮಸಿಂಗ್ ಡಾ॥ (ಜೇವರ್ಗಿ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1216 ರ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

16/3/2020
[ಬಿ.ಎನ್.ದೇವರಾಜ್]
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ(ಪೊಲೀಸ್‌ವೆಚ್ಚ).

ಕರ್ನಾಟಕ ವಿಧಾನಸಭೆ

1] ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1216

2] ಸದಸ್ಯರ ಹೆಸರು : ಡಾ॥ ಅಜಯ್ ಧರ್ಮಸಿಂಗ್ (ಜೇವರ್ಗಿ)

3] ಉತ್ತರಿಸುವ ದಿನಾಂಕ : 17.03.2020.

4] ಉತ್ತರಿಸುವ ಸಚಿವರು : ಗೃಹ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಜೇವರ್ಗಿ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಪೊಲೀಸ್ ಠಾಣೆಗಳೆಷ್ಟು?	ಜೇವರ್ಗಿ ತಾಲ್ಲೂಕಿನಲ್ಲಿ (ಜೇವರ್ಗಿ, ನೆಲೋಗಿ ಮತ್ತು ಯಡ್ರಾಮಿ) ಒಟ್ಟು 03 ಪೊಲೀಸ್ ಠಾಣೆಗಳು ಕಾರ್ಯನಿರ್ವಹಿಸುತ್ತಿವೆ.
ಆ)	ಈ ಠಾಣೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯ ಕೊರತೆಯು ಸರ್ಕಾರದ ಗಮನಕ್ಕೆ ಬಂದಿದೆಯೇ?	ಹೌದು. ಜೇವರ್ಗಿ ತಾಲ್ಲೂಕಿನಲ್ಲಿರುವ ಪೊಲೀಸ್ ಠಾಣೆಗಳಲ್ಲಿ 01 ಪಿ.ಎಸ್.ಐ ಹುದ್ದೆ ಮತ್ತು 02 ಸಿ.ಪಿ.ಸಿ. ಹುದ್ದೆಗಳು ಖಾಲಿ ಇರುತ್ತವೆ.
ಇ)	ಪೊಲೀಸ್ ಠಾಣೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ವಸತಿ ಹಾಗೂ ಮೂಲಭೂತ ಸೌಕರ್ಯ, ವಾಹನಗಳನ್ನು ಒದಗಿಸುವಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ?	ಈ ಮೂರು ಪೊಲೀಸ್ ಠಾಣೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳ ಮಂಜೂರಾತಿ ಬಲ ಒಟ್ಟು 125 ಇದ್ದು, ಹಾಲಿ ಲಭ್ಯವಿರುವ ವಸತಿ ಗೃಹಗಳು ಒಟ್ಟು 104 ಇರುತ್ತವೆ. ಅಗತ್ಯಕ್ಕನುಗುಣವಾಗಿ ವಾಹನಗಳನ್ನು ಒದಗಿಸಲಾಗಿರುತ್ತದೆ.

ಹೆಚ್‌ಡಿ 30 ಪಿಒಪಿ 2020

[ಬಸವರಾಜ ಬೊಮ್ಮಾಯಿ]
ಗೃಹ ಸಚಿವರು.

ಕರ್ನಾಟಕ ಸರ್ಕಾರ

ಹೆಚ್‌ಡಿ 14 ಇಎಂವಿ 2020

ಕರ್ನಾಟಕ ಸರ್ಕಾರ ಸಚಿವಾಲಯ
ವಿಧಾನ ಸೌಧ,
ಬೆಂಗಳೂರು, ದಿನಾಂಕ:16.03.2020.

ಇವರಿಂದ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಒಳಾಡಳಿತ ಇಲಾಖೆ,
ಬೆಂಗಳೂರು

H1
ಆ/S
17/3/20

ಇವರಿಗೆ,
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಬಸವನಗೌಡ ಆರ್ ಪಾಟೀಲ್ (ಯತ್ನಾಳ್) (ವಿಜಯನಗರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2028ಗೆ ಉತ್ತರಿಸುವ ಕುರಿತು.

ಉಲ್ಲೇಖ: ಪತ್ರ ಸಂಖ್ಯೆ:ಪ್ರಶಾವಿಸ:15ನೇವಿಸ/6ಅ/ಚುಗು-ಚುರ.ಪ್ರಶ್ನೆ/04/2020, ದಿ:06.03.2020.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಬಸವನಗೌಡ ಆರ್ ಪಾಟೀಲ್ (ಯತ್ನಾಳ್) (ವಿಜಯನಗರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2028ರ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

16/3/2020
[ಬಿ.ಎನ್.ದೇವರಾಜ್]
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ(ಪೊಲೀಸ್‌ವೆಚ್ಚ).

ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2028
2. ಮಾನ್ಯ ಸದಸ್ಯರ ಹೆಸರು : ಶ್ರೀ ಬಸನಗೌಡ ಆರ್ ಪಾಟೀಲ್ (ಯತ್ನಾಳ್) (ವಿಜಯಪುರ ನಗರ)
3. ಉತ್ತರಿಸುವ ದಿನಾಂಕ : 17/03/2020
4. ಉತ್ತರಿಸುವ ಸಚಿವರು : ಗೃಹ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಗೃಹ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು ವಾಹನಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ಕಳೆದ 3 ವರ್ಷಗಳಿಂದ ಜಖಂಗೊಂಡಿರುವ ವಾಹನಗಳ ಸಂಖ್ಯೆ ಎಷ್ಟು (ಮಾಹಿತಿ ನೀಡುವುದು);	ಪೊಲೀಸ್ ಇಲಾಖೆಯಲ್ಲಿ ಒಟ್ಟು 12687 ವಾಹನಗಳು ಇರುತ್ತವೆ. ಕಳೆದ 3 ವರ್ಷಗಳಲ್ಲಿ ಜಖಂಗೊಂಡಿರುವ ವಾಹನಗಳು 163.
ಆ)	ಜಖಂಗೊಂಡಿರುವ ವಾಹನಗಳು ಗೃಹ ಇಲಾಖೆಯ ಕಛೇರಿಗಳ ಬಳಿ ದುರಸ್ತಿಗಾಗಿ ನಿಂತಲ್ಲೇ ನಿಂತಿರುವ ಚಿತ್ರಣಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅವುಗಳನ್ನು ದುರಸ್ತಿಪಡಿಸುವಲ್ಲಿ ಅಥವಾ ಗುಜರಿಗೆ ಹಾಕುವಲ್ಲಿ ಕ್ರಮಗಳನ್ನು ಕೈಗೊಳ್ಳಲಾಗಿದೆಯೇ; ಕ್ರಮ ಕೈಗೊಂಡಿದ್ದಲ್ಲಿ, ಅದು ಯಾವ ಹಂತದಲ್ಲಿದೆ (ಮಾಹಿತಿ ನೀಡುವುದು);	ಜಖಂಗೊಂಡಿರುವ ವಾಹನಗಳು ಗೃಹ ಇಲಾಖೆಯ ಕಛೇರಿಗಳ ಬಳಿ ನಿಂತಿರುವುದಿಲ್ಲ. ಇಲಾಖಾ ನಿಯಮಾನುಸಾರ, ಸರ್ಕಾರದ ಆದೇಶಗಳಂತೆ ಹಾಗೂ ಕೆ.ಜಿ.ಐ.ಡಿ ವಿಮೆ ಮತ್ತು ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಲಿಖಿತ ಅಭಿಪ್ರಾಯಗಳನ್ನು ಪಡೆದು ಅವುಗಳನ್ನು ದುರಸ್ತಿ ಪಡಿಸುವ ಅಥವಾ ನಿರುಪಯುಕ್ತಗೊಳಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.
ಇ)	ಸದರಿ ಜಖಂಗೊಂಡಿರುವ ವಾಹನಗಳನ್ನು ದುರಸ್ತಿಗೊಳಿಸಿ, ಕಛೇರಿಗೆ ಉಪಯೋಗಿಸುವುದು ಅಥವಾ ಹರಾಜುಗೊಳಿಸಿದಲ್ಲಿ ಅದರಿಂದ ಸರ್ಕಾರಕ್ಕೆ ಆಗುವ ವೆಚ್ಚ ಮತ್ತು ಆದಾಯವೆಷ್ಟು (ಮಾಹಿತಿ ನೀಡುವುದು);	ಆರ್.ಟಿ.ಓ. ರವರ ವರದಿ ಪ್ರಕಾರ ಜಖಂಗೊಡಿರುವ ವಾಹನಗಳನ್ನು ದುರಸ್ತಿ ಪಡಿಸಿ ಕಛೇರಿಯ ಕರ್ತವ್ಯಕ್ಕೆ ಉಪಯೋಗಿಸಿಕೊಳ್ಳಲಾಗುವುದು ಹಾಗೂ ದುರಸ್ತಿಯಾಗದಂತ ವಾಹನಗಳನ್ನು ಆರ್.ಟಿ.ಓ ರವರು ನಿಗಧಿಪಡಿಸಿದ ದರಕ್ಕಿಂತ ಹೆಚ್ಚಿನ ಮೊತ್ತಕ್ಕೆ ಬಿಡ್ ಆದ ಮೊತ್ತವನ್ನು "055" ಲೆಕ್ಕ ಶೀರ್ಷಿಕೆಯಡಿಯಲ್ಲಿ ಸರ್ಕಾರಕ್ಕೆ ಜಮಾ ಮಾಡಲಾಗುವುದು.

ಈ)	ಈ ಇಲಾಖೆಗೆ ಪ್ರತಿ ವರ್ಷ ವಾಹನಗಳ ದುರಸ್ತಿಗಾಗಿ ಮೀಸಲಾಗಿಟ್ಟಿರುವ ಅನುದಾನವೆಷ್ಟು; ಅದರಲ್ಲಿ ಬಳಕೆ ಮಾಡಿಕೊಳ್ಳಲಾಗುತ್ತಿರುವ ಮೊತ್ತ ಮತ್ತು ಉಳಿಕೆ ಹಣವೆಷ್ಟು (ವರ್ಷವಾರು ಮಾಹಿತಿ ನೀಡುವುದು)?	ವಾಹನಗಳ ದುರಸ್ತಿಗಾಗಿ ಪ್ರತ್ಯೇಕವಾಗಿ ಅನುದಾನವನ್ನು ಸರ್ಕಾರವು ಮೀಸಲಿಟ್ಟಿರುವುದಿಲ್ಲ. ಬದಲಾಗಿ ವಾಹನಗಳ ವಿಮೆ, ವಾಹನಗಳ ದುರಸ್ತಿ, ವಾಹನಗಳ ಇಂಧನ ವೆಚ್ಚ ಮತ್ತು ವಾಹನಗಳ ಖರೀದಿಗಾಗಿ ಒಟ್ಟಾರೆಯಾಗಿ ಸವಿವರ ಲೆಕ್ಕಶೀರ್ಷಿಕೆ 195–ಸಾರಿಗೆ ವೆಚ್ಚ ಅಡಿಯಲ್ಲಿ ಭರಿಸಲು ಆಯವ್ಯಯದಲ್ಲಿ ಅನುದಾನವನ್ನು ಒದಗಿಸಲಾಗುತ್ತದೆ. ಅನುದಾನದ ವಿವರವನ್ನು ಈ ಕೆಳಕಂಡಂತೆ ನೀಡಿದೆ: (ರೂ.ಲಕ್ಷಗಳಲ್ಲಿ)

ವರ್ಷ	ಆಯವ್ಯಯದಲ್ಲಿ ಒದಗಿಸಿರುವ ಅನುದಾನ	ವೆಚ್ಚ ಮಾಡಿರುವ ಅನುದಾನ	ಉಳಿಕೆಯಾಗಿರುವ ಅನುದಾನ
2016–17	13947.96	13937.21	10.75
2017–18	15777.00	15083.91	693.09
2018–19	18580.00	15226.70	3353.30
ಒಟ್ಟು	**48304.96**	**44247.82**	**4057.14**

<u>ಸಂಖ್ಯೆ:ಹೆಚ್‌ಡಿ 14 ಇಎಂವಿ 2020</u>

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು

ಕರ್ನಾಟಕ ಸರ್ಕಾರ

ಹೆಚ್‌ಡಿ 34 [illegible] 2020

ಕರ್ನಾಟಕ ಸರ್ಕಾರ ಸಚಿವಾಲಯ
ವಿಧಾನ ಸೌಧ,
ಬೆಂಗಳೂರು, ದಿನಾಂಕ:16.03.2020.

ಇವರಿಂದ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಒಳಾಡಳಿತ ಇಲಾಖೆ,
ಬೆಂಗಳೂರು

ಇವರಿಗೆ,
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಅನಿಲ್ ಚಿಕ್ಕಮಾದು (ಹೆಚ್.ಡಿ.ಕೋಟೆ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2171ಗೆ ಉತ್ತರಿಸುವ ಕುರಿತು.

ಉಲ್ಲೇಖ: ಪತ್ರ ಸಂಖ್ಯೆ:ಪ್ರಶಾವಿಸ:15ನೇವಿಸ/6ಅ/ಪ್ರ.ಸಂ:2171/2020, ದಿ:05.03.2020.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಅನಿಲ್ ಚಿಕ್ಕಮಾದು (ಹೆಚ್.ಡಿ.ಕೋಟೆ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2171ರ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

16/3/2020
[ಬಿ.ಎನ್.ದೇವರಾಜ್]
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ(ಪೊಲೀಸ್‌ವೆಚ್ಚ).

ಕರ್ನಾಟಕ ವಿಧಾನಸಭೆ

1] ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2171

2] ಮಾನ್ಯ ಸದಸ್ಯರ ಹೆಸರು : ಶ್ರೀ ಅನಿಲ್ ಚಿಕ್ಕಮಾದು (ಹೆಚ್.ಡಿ. ಕೋಟೆ)

3] ಉತ್ತರಿಸುವ ದಿನಾಂಕ : 17.03.2020;

4] ಉತ್ತರಿಸುವ ಸಚಿವರು : ಗೃಹ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ಹೆಗ್ಗಡದೇವನಕೋಟೆ ತಾಲ್ಲೂಕು ಬೀಚನಹಳ್ಳಿಯಲ್ಲಿರುವ ಪೊಲೀಸ್ ಠಾಣೆಯು ಮುಖ್ಯ ರಸ್ತೆಯಿಂದ ದೂರವಿದ್ದು, ಠಾಣೆಗೆ ಸಾರ್ವಜನಿಕರು ಬಂದು ಹೋಗಲು ಹಾಗೂ ಸಮರ್ಥವಾಗಿ ಕರ್ತವ್ಯ ನಿರ್ವಹಿಸಲು ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬೀಚನಹಳ್ಳಿ ಪೊಲೀಸ್ ಠಾಣೆಯು ಮೈಸೂರು-ಮಾನಂದವಾಡಿ ಮುಖ್ಯ ರಸ್ತೆಯಿಂದ 11 ಕಿ.ಮೀ ಅಂತರವಿದ್ದು, ಸಾರ್ವಜನಿಕರಿಗೆ ಠಾಣೆಗೆ ಹೋಗಿಬರಲು ಖಾಸಗಿ ಹಾಗೂ ಸಾರಿಗೆ ಸಂಸ್ಥೆಯ ವಾಹನಗಳ ಸೌಲಭ್ಯ ಇರುತ್ತದೆ. ಹಾಗೂ ಪೊಲೀಸರು ಸಮರ್ಥವಾಗಿ ಕೆಲಸವನ್ನು ನಿರ್ವಹಿಸಲು ಯಾವುದೇ ತೊಂದರೆ ಇರುವುದಿಲ್ಲ.
ಆ)	ಹಾಗಿದ್ದಲ್ಲಿ, ಹೆಗ್ಗಡದೇವನಕೋಟೆ ತಾಲ್ಲೂಕು ಬೀಚನಹಳ್ಳಿಯಲ್ಲಿರುವ ಪೊಲೀಸ್ ಠಾಣೆಯನ್ನು ಅಂತರಸಂತೆಗೆ ಹಾಗೂ ಅಂತರಸಂತೆಯಲ್ಲಿರುವ ಪೊಲೀಸ್ ಉಪ ಠಾಣೆಯನ್ನು ಬೀಚನಹಳ್ಳಿಗೆ ಅಂತರ್ ಸ್ಥಳಾಂತರಗೊಳಿಸುವ ಪ್ರಸ್ತಾವನೆಯು ಸರ್ಕಾರಕ್ಕೆ ಸಲ್ಲಿಕೆಯಾಗಿದೆಯೇ;	ಹೆಗ್ಗಡದೇವನಕೋಟೆ ತಾಲ್ಲೂಕು ಬೀಚನಹಳ್ಳಿಯಲ್ಲಿರುವ ಪೊಲೀಸ್ ಠಾಣೆಯನ್ನು ಅಂತರಸಂತೆಗೆ ಹಾಗೂ ಅಂತರಸಂತೆಯಲ್ಲಿರುವ ಪೊಲೀಸ್ ಉಪಠಾಣೆಯನ್ನು ಬೀಚನಹಳ್ಳಿಗೆ ಅಂತರ್ ಸ್ಥಳಾಂತರಗೊಳಿಸುವ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.
ಇ)	ಹಾಗಿದ್ದಲ್ಲಿ, ಸದರಿ ಪ್ರಸ್ತಾವನೆಯು ಯಾವ ಹಂತದಲ್ಲಿದೆ; ಯಾವಾಗ ಸ್ಥಳಾಂತರಗೊಳಿಸಲಾಗುವುದು; (ಸಂಪೂರ್ಣ ವಿವರ ನೀಡುವುದು)	
ಈ)	ಪ್ರಸ್ತಾವನೆ ಸಲ್ಲಿಕೆಯಾಗದಿದ್ದಲ್ಲಿ, ಸದರಿ ಪೊಲೀಸ್ ಠಾಣೆಯನ್ನು ಅಂತರ್ ಸ್ಥಳಾಂತರಿಸುವ ಬಗ್ಗೆ ಮುಂದಿನ ದಿನಗಳಲ್ಲಿ ಸರ್ಕಾರ ಕೈಗೊಳ್ಳುವ	

ಸಂಖ್ಯೆ:ಹೆಚ್‌ಡಿ 34 ಪಿಓಪಿ 2020

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 26 ಎಂಎನ್‌ಐ 2020

ಕರ್ನಾಟಕ ಸರ್ಕಾರ ಸಚಿವಾಲಯ
ವಿಕಾಸ ಸೌಧ
ಬೆಂಗಳೂರು, ದಿನಾಂಕ:17-03-2020.

82
17/3/2020

ಇಂದ
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ
ವಿಕಾಸಸೌದ, ಬೆಂಗಳೂರು.

ಇವರಿಗೆ.
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ ಸಚಿವಾಲಯ
ವಿಧಾನಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನಸಭೆಯ ಸದಸ್ಯರಾದ ಶ್ರೀ ಕೃಷ್ಣ ಭೈರೇಗೌಡ (ಬ್ಯಾಟರಾಯನಪುರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1211ಕ್ಕೆ ಉತ್ತರ ಒದಗಿಸುವ ಬಗ್ಗೆ.

ಉಲ್ಲೇಖ: ಸಂಖ್ಯೆ:ಪ್ರಶಾವಿಸ:15ನೇವಿಸ:6ಅ:ಪ್ರ.ಸಂ.1211:2020, ದಿ:04-03-2020.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನಸಭೆಯ ಸದಸ್ಯರಾದ ಶ್ರೀ ಕೃಷ್ಣ ಭೈರೇಗೌಡ (ಬ್ಯಾಟರಾಯನಪುರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1211ಕ್ಕೆ ಸಂಬಂಧಿಸಿದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

17/3/2020

ಸರ್ಕಾರದ ಅಧೀನ ಕಾರ್ಯದರ್ಶಿ (ಪರವಾಗಿ)
ನಗರಾಭಿವೃದ್ಧಿ ಇಲಾಖೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1211
ಸದಸ್ಯರ ಹೆಸರು	:	ಶ್ರೀ ಕೃಷ್ಣ ಭೈರೇಗೌಡ (ಬ್ಯಾಟರಾಯನಪುರ)
ಉತ್ತರಿಸಬೇಕಾದ ದಿನಾಂಕ	:	17-03-2020
ಉತ್ತರಿಸಬೇಕಾದ ಸಚಿವರು	:	ಮಾನ್ಯ ಮುಖ್ಯಮಂತ್ರಿಯವರು

****

ಕ್ರಮ ಸಂ.	ಪ್ರಶ್ನೆ	ಉತ್ತರ
ಅ	ಬೆಂಗಳೂರಿನಲ್ಲಿ ಉತ್ಪತ್ತಿಯಾಗುವ ಎಲ್ಲಾ ವಿವಿಧ ತ್ಯಾಜ್ಯ ನೀರನ್ನು ಸಂಸ್ಕರಿಸಲು ರಾಜ್ಯ/ರಾಷ್ಟ್ರೀಯ ನೀತಿಗಳು ಅಥವಾ ನ್ಯಾಯಾಲಯ/ ನ್ಯಾಯ ಮಂಡಳಿಯಿಂದ ಸೂಚನೆಗಳಿವೆಯೇ; ಹಾಗಿದ್ದರೆ, ಅವು ಯಾವುವು ಮತ್ತು ಮಾರ್ಗಸೂಚಿಗಳು ಯಾವುವು; ಇದನ್ನು ಸಾಧಿಸಲು ಕಾಲಮಿತಿಗಳನ್ನು ಸೂಚಿಸಲಾಗಿದೆಯೇ;	ಬೆಂಗಳೂರು ಜಲಮಂಡಳಿ ಕಾಯ್ದೆ ಪ್ರಕಾರ ನೀರು ಸರಬರಾಜು ಮಾಡುವ ಪ್ರದೇಶಗಳಿಗೆ ಒಳಚರಂಡಿ ವ್ಯವಸ್ಥೆ ಅಳವಡಿಸಿ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು ಸಂಸ್ಕರಣ ಘಟಕಗಳಿಗೆ ಸಾಗಿಸಿ ಘಟಕಗಳಲ್ಲಿ ಸಂಸ್ಕರಿಸುವುದು ಬೆಂಗಳೂರು ಜಲಮಂಡಳಿಯ ಮೂಲ ಕಾರ್ಯಭಾರವಾಗಿರುತ್ತದೆ. ಮಾನ್ಯ ಹಸಿರು ನ್ಯಾಯಾಧೀಕರಣದಲ್ಲಿ ಕಾಲ ಕಾಲಕ್ಕೆ ದಾಖಲಾಗಿರುವ/ದಾಖಲಾಗುವ ಮೂಲ ದಾವೆಗಳಲ್ಲಿ ನೀಡಿರುವ ಆದೇಶಗಳನ್ನು ಪಾಲಿಸಲಾಗುತ್ತಿದೆ. ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ತ್ಯಾಜ್ಯ ನೀರಿನ ಸಂಸ್ಕರಣೆಗೆ ಮಾನದಂಡಗಳನ್ನು ನಿಗದಿಪಡಿಸಿದ್ದು, ಇವುಗಳ ಪ್ರಕಾರ ಬೆಂಗಳೂರು ಜಲಮಂಡಳಿಯು ತ್ಯಾಜ್ಯ ನೀರನ್ನು ಶುದ್ಧೀಕರಣ ಘಟಕಗಳಲ್ಲಿ ಸಂಸ್ಕರಿಸಿ ಕೆಳದಂಡೆಯಲ್ಲಿರುವ ಕಾಲುವೆ, ಕೆರೆಗಳಿಗೆ ಹರಿಯಬಿಡಲಾಗುತ್ತದೆ.
ಆ	ಹೆಬ್ಬಾಳ-ನಾಗವಾರ ಮತ್ತು ಕೆ.ಸಿ.ವ್ಯಾಲಿಗಳ ಸಂಸ್ಕರಣ ಘಟಕಗಳಲ್ಲಿ ಅಂದಾಜು ತ್ಯಾಜ್ಯ ನೀರಿನ ಹರಿವಿನ ಪ್ರಮಾಣ ಎಷ್ಟು; ಈ ಕಣಿವೆಗಳಲ್ಲಿ ಇರುವ ಸಂಸ್ಕರಣ ಘಟಕಗಳ ಸಾಮರ್ಥ್ಯವೆಷ್ಟು;	ಹೆಬ್ಬಾಳ-ನಾಗವಾರ ಕಣಿವೆಯಲ್ಲಿರುವ ತ್ಯಾಜ್ಯನೀರಿನ ಸಂಸ್ಕರಣ ಘಟಕಗಳಿಗೆ ಪ್ರಸ್ತುತ ತ್ಯಾಜ್ಯ ನೀರಿನ ಹರಿವಿನ ಪ್ರಮಾಣ ಸುಮಾರು ದಿನಂಪ್ರತಿ 185 ದಶಲಕ್ಷ ಲೀಟರ್‌ಗಳಷ್ಟಿದೆ ಹಾಗೂ ಕೆ.ಸಿ. ಕಣಿವೆಯಲ್ಲಿರುವ ತ್ಯಾಜ್ಯನೀರಿನ ಸಂಸ್ಕರಣ ಘಟಕಗಳಿಗೆ ಪ್ರಸ್ತುತ ತ್ಯಾಜ್ಯ ನೀರಿನ ಹರಿವಿನ ಪ್ರಮಾಣ ಸುಮಾರು ದಿನಂಪ್ರತಿ 410.50 ದಶಲಕ್ಷ ಲೀಟರ್‌ಗಳಷ್ಟಿದೆ. ಉಳಿದಂತೆ ಹಲವಾರು ಕಡೆ ಮಳೆನೀರು ಕಾಲುವೆಗಳಲ್ಲಿರುವ ಕೊಳವೆ ಮಾರ್ಗಗಳ ನಿರ್ವಹಣೆಯಲ್ಲಿ ವ್ಯತ್ಯಯಗಳಿಂದ ಅಲ್ಪ ಪ್ರಮಾಣದ ತ್ಯಾಜ್ಯ ನೀರು ಮಳೆನೀರು ಕಾಲುವೆಗಳಲ್ಲಿ ಹರಿದು ಹೋಗುತ್ತಿದ್ದು ಇದನ್ನು ಕೊಳವೆ ಮಾರ್ಗಗಳಿಗೆ ಸಂಪರ್ಕಿಸಿ ಸಂಸ್ಕರಣ ಘಟಕಗಳಿಗೆ ಕೊಂಡೊಯ್ಯಲು ಅವಶ್ಯವಿರುವ ಕಾಮಗಾರಿಗಳನ್ನು ಹಂತ ಹಂತವಾಗಿ ಕೈಗೊಳ್ಳಲಾಗುತ್ತದೆ. ಹೆಬ್ಬಾಳ-ನಾಗವಾರ ಕಣಿವೆಯಲ್ಲಿರುವ ತ್ಯಾಜ್ಯನೀರಿನ ಸಂಸ್ಕರಣ ಘಟಕಗಳ ಒಟ್ಟು ಸಾಮರ್ಥ್ಯ ದಿನಂಪ್ರತಿ 220 ದಶಲಕ್ಷ ಲೀಟರ್‌ಗಳಷ್ಟಿದೆ. ಕೆ.ಸಿ ಕಣಿವೆಯಲ್ಲಿರುವ ತ್ಯಾಜ್ಯನೀರಿನ ಸಂಸ್ಕರಣ ಘಟಕಗಳ ಒಟ್ಟು ಸಾಮರ್ಥ್ಯ ದಿನಂಪ್ರತಿ 516.5 ದಶಲಕ್ಷ ಲೀಟರ್‌ಗಳಷ್ಟಿದೆ.
ಇ	ಸಂಸ್ಕರಣ ಘಟಕಗಳ ಸಾಮರ್ಥ್ಯಕ್ಕಿಂತ ಹೆಚ್ಚು ತ್ಯಾಜ್ಯ ನೀರಿನ ಹರಿವು ಇರುವುದು ನಿಜವೇ; ಅಂತಹ ಸ್ಥಳಗಳು, ತ್ಯಾಜ್ಯ ನೀರಿನ ಹರಿವು ಮತ್ತು ಸದರಿ ಸಂಸ್ಕರಣ ಘಟಕಗಳ ಸಾಮರ್ಥ್ಯವೆಷ್ಟು;	ಹೌದು. ಕೋರಮಂಗಲ ಮತ್ತು ಚಲ್ಲಘಟ್ಟ ಕಣಿವೆಯಲ್ಲಿ ಹಾಗೂ ರಾಜಕೆನಲ್ ಜಕ್ಕೂರು ಭಾಗಗಳಲ್ಲಿ ಹೆಚ್ಚಿನ ತ್ಯಾಜ್ಯ ನೀರಿನ ಹರಿವು ಕ್ರಮವಾಗಿ 110 ದ.ಲ.ಲೀ. ಹಾಗೂ 40 ದ.ಲ.ಲೀ.ರಷ್ಟಿದೆ. ಹೆಚ್ಚಿನ ಹರಿವು ಇರುವ ಪ್ರದೇಶಗಳ ಘಟಕಗಳ ವಿವರ ಈ ಕೆಳಕಂಡಂತಿದೆ.

ಕಣಿವೆ	ಘಟಕಗಳ ಸಾಮರ್ಥ್ಯ ದಿನಂಪ್ರತಿ ದಶಲಕ್ಷ ಲೀಟರ್‌ಗಳಲ್ಲಿ	ಪ್ರಸ್ತುತ ಹರಿವಿನ ಪ್ರಮಾಣ ದಿನಂಪ್ರತಿ ದಶಲಕ್ಷ ಲೀಟರ್‌ಗಳಲ್ಲಿ
ಕೋರಮಂಗಲ-ಚಲ್ಲಘಟ್ಟ	308	410
ರಾಜಕೆನಾಲ್	80	120
ಜಕ್ಕೂರು	15	20

. . . .2)

<table>
<tr>
<td>ಈ</td>
<td>ನಿರ್ಮಾಣ ಹಂತದಲ್ಲಿರುವ ಸಂಸ್ಕರಣ ಘಟಕಗಳು ಕಾರ್ಯಾರಂಭ ಮಾಡಿದಲ್ಲಿ, ಭವಿಷ್ಯದಲ್ಲಿ ಸಂಪೂರ್ಣ ತ್ಯಾಜ್ಯ ನೀರನ್ನು ಸಂಸ್ಕರಿಸಲು ಸಮರ್ಪಕವಾಗಿವೆಯೇ;
(ಘಟಕಗಳ ಸಾಮರ್ಥ್ಯ ಮತ್ತು ತ್ಯಾಜ್ಯ ನೀರಿನ ಅಂದಾಜುಗಳ ವಿವರವನ್ನು ಒದಗಿಸುವುದು)</td>
<td>ನಿರ್ಮಾಣ ಹಂತದಲ್ಲಿರುವ ಸಂಸ್ಕರಣ ಘಟಕಗಳು ಕಾರ್ಯಾರಂಭ ಮಾಡಿದಲ್ಲಿ, ಭವಿಷ್ಯದಲ್ಲಿ ಸಂಪೂರ್ಣ ತ್ಯಾಜ್ಯ ನೀರನ್ನು ಸಂಸ್ಕರಿಸಲು ಸಮರ್ಪಕವಾಗುವುದು.

ಹೆಬ್ಬಾಳ – ನಾಗವಾರ ಮತ್ತು ಕೆ.ಸಿ. ವ್ಯಾಲಿಯಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ತ್ಯಾಜ್ಯ ನೀರಿನ ಘಟಕಗಳ ವಿವರಗಳು ಈ ಕೆಳಗಿನಂತಿವೆ:
<table>
<tr><th>ಕ್ರಮ ಸಂಖ್ಯೆ</th><th>ಸಂಸ್ಕರಣ ಘಟಕದ ಸ್ಥಳ</th><th>ಸಂಸ್ಕರಣ ಘಟಕದ ಸಾಮರ್ಥ್ಯ ದಿನಂಪ್ರತಿ ದಶಲಕ್ಷ ಲೀಟರ್‌ಗಳಲ್ಲಿ</th><th>ಘಟಕಗಳಿಗೆ ಪ್ರಸ್ತುತ ಒಳಹರಿವಿನ ಪ್ರಮಾಣ ದ.ಲ.ಲೀ. ಗಳಲ್ಲಿ</th></tr>
<tr><td>1</td><td>ಕೋರಮಂಗಲ ಮತ್ತು ಚೆಲ್ಲಘಟ್ಟ ಕಣಿವೆ</td><td>308 (218+30+60)</td><td>260 (180+30+50)</td></tr>
<tr><td>2</td><td>ಹೆಬ್ಬಾಳ</td><td>60</td><td>55</td></tr>
<tr><td>3</td><td>ಯಲಹಂಕ</td><td>10</td><td>05</td></tr>
<tr><td>4</td><td>ಜಕ್ಕೂರು</td><td>15</td><td>15</td></tr>
<tr><td>5</td><td>ಕೆ. ಆರ್. ಪುರಂ</td><td>20</td><td>20</td></tr>
<tr><td>6</td><td>ಕಾಡಬೀಸನಹಳ್ಳಿ</td><td>50</td><td>45</td></tr>
<tr><td>7</td><td>ರಾಜಾಕೆನಾಲ್–ಘಟಕ 1&2</td><td>40+40</td><td>120</td></tr>
<tr><td>8</td><td>ಕಬ್ಬನ್ ಪಾರ್ಕ್</td><td>4</td><td>4</td></tr>
<tr><td>9</td><td>ಲಾಲ್‌ಬಾಗ್</td><td>1.5</td><td>1.5</td></tr>
<tr><td>12</td><td>ಕಾಡುಗೋಡಿ</td><td>6</td><td>5</td></tr>
<tr><td>13</td><td>ಬೆಳ್ಳಂದೂರು ಅಮಾನಿಕೆರೆ</td><td>90</td><td>60</td></tr>
<tr><td>14</td><td>ಹೊರಮಾವು ಅಗರ</td><td>20</td><td>20</td></tr>
<tr><td>15</td><td>ಎಲೆಮಲ್ಲಪ್ಪ ಚೆಟ್ಟಿಕೆರೆ</td><td>15</td><td>15</td></tr>
<tr><td>16</td><td>ಹಲಸೂರು</td><td>2</td><td>2</td></tr>
<tr><td>17</td><td>ಸಾರಕ್ಕಿ</td><td>5</td><td>5</td></tr>
<tr><td>18</td><td>ಅಗರ (ಭಾಗಶಃ ಕಾರ್ಯಚಾಲನೆಯಾಗಿದೆ)</td><td>35</td><td>15</td></tr>
<tr><td>19</td><td>ಹುಳಿಮಾವು (ಭಾಗಶಃ ಕಾರ್ಯಚಾಲನೆಯಾಗಿದೆ)</td><td>10</td><td>10</td></tr>
<tr><td>20</td><td>ಚಿಕ್ಕಬೇಗೂರು (ಭಾಗಶಃ ಕಾರ್ಯಚಾಲನೆಯಾಗಿದೆ)</td><td>5</td><td>5</td></tr>
<tr><td></td><td>ಒಟ್ಟು</td><td>736.50</td><td>662.50</td></tr>
</table>
</td>
</tr>
<tr>
<td>ಉ</td>
<td>ಬೆಂಗಳೂರಿನ ಎಲ್ಲಾ ತ್ಯಾಜ್ಯ ನೀರನ್ನು ಅಗತ್ಯವಾಗಿ ಸಂಸ್ಕರಿಸಲು ಸರ್ಕಾರ ಯಾವ ನಿರ್ದಿಷ್ಟ ಯೋಜನೆಗಳನ್ನು ಹೊಂದಿದೆ?</td>
<td>ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸಂಸ್ಕರಣ ಘಟಕಗಳ ಜೊತೆ ನಿರ್ಮಾಣ ಹಂತದಲ್ಲಿರುವ 9 ಘಟಕಗಳು 2020ರ ಅಂತ್ಯದಲ್ಲಿ ಪೂರ್ಣಗೊಳ್ಳುತ್ತವೆ. ಇದರೊಂದಿಗೆ ನಗರದ ಕೇಂದ್ರ ಮತ್ತು ಹೊಸದಾಗಿ ಸೇರ್ಪಡೆಯಾದ ಭಾಗಗಳ ಎಲ್ಲಾ ತ್ಯಾಜ್ಯ ನೀರು ಸಂಸ್ಕರಿಸಲು ಸಮರ್ಪಕವಾಗುವುದು. ಕಾವೇರಿ 5ನೇ ಹಂತದ ಯೋಜನೆಯಲ್ಲಿ ಒಟ್ಟು 114 ದಶಲಕ್ಷ ಲೀಟರ್ ಸಾಮರ್ಥ್ಯದ 14 ಸಂಸ್ಕರಣ ಘಟಕಗಳನ್ನು 110 ಹಳ್ಳಿಗಳ ಪ್ರದೇಶಗಳಲ್ಲಿ ನಿರ್ಮಿಸಲು ಉದ್ದೇಶಿಸಿದ್ದು, 2023ರ ಅಂತ್ಯದಲ್ಲಿ ಪೂರ್ಣಮಾಡಿ ಕಾರ್ಯಚಾಲನೆಯನ್ನು ಮಾಡಲಾಗುವುದು. ಈ ಎಲ್ಲಾ ಘಟಕಗಳು ಕಾರ್ಯನಿರ್ವಹಿಸಿದರೆ ಆ ವೇಳೆಗೆ ನಗರದಲ್ಲಿ ಉತ್ಪತ್ತಿಯಾಗುವ ಪೂರ್ಣ ಮಟ್ಟದ ತ್ಯಾಜ್ಯ ನೀರನ್ನು ಸಂಸ್ಕರಿಸಲು ಸಾಧ್ಯವಾಗುವುದು.</td>
</tr>
</table>

ಸಂಖ್ಯೆ: ನಅಇ 26 ಎಂಎನ್‌ಐ 2020

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ.

ಕರ್ನಾಟಕ ಸರ್ಕಾರ

ಸಂಖ್ಯೆ.ಲೋಇ E-56 ಇಎಪಿ 2020

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸಸೌಧ, 3ನೇ ಮಹಡಿ
ಡಾ:ಅಂಬೇಡ್ಕರ್ ವೀಧಿ, ಬೆಂಗಳೂರು
ಫೋನ್ ನಂ. 2203 4862/5113/4857
ದಿನಾಂಕ : 17-03-2020

153
US
17/3/2020

ಇಂದ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಲೋಕೋಪಯೋಗಿ, ಬಂದರು ಹಾಗೂ
ಒಳನಾಡು ಜಲಸಾರಿಗೆ ಇಲಾಖೆ,
ಬೆಂಗಳೂರು.

ಇವರಿಗೆ,
ಸರ್ಕಾರದ ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ:-ವಿಧಾನ ಸಭೆಯ ಸದಸ್ಯರಾದ ಶ್ರೀ ಶಿವಶಂಕರ ರೆಡ್ಡಿ ಎನ್. ಹೆಚ್ (ಗೌರಿಬಿದನೂರು) ರವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2117 ಗೆ ಉತ್ತರ ಸಲ್ಲಿಸುವ ಕುರಿತು.

ಉಲ್ಲೇಖ:-ತಮ್ಮ ಪತ್ರ ಸಂಖ್ಯೆ.. ಪ್ರಶಾವಿಸ:15ನೇವಿಸ:6ಅ:ಪ್ರಸಂ.2117:2020 ದಿ: 05-03-2020.

15ನೇ ವಿಧಾನಸಭೆ 6ನೇ ಅಧಿವೇಶನದಲ್ಲಿ ಸೂಚಿಸಿರುವ, ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ. 2117 ಕ್ಕೆ ಉತ್ತರಗಳನ್ನು 100 ಪ್ರತಿಗಳಲ್ಲಿ ಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,

Bindu
17/03/2020
ವಿಶೇಷಾಧಿಕಾರಿ (ಇಎಪಿ) (ಪ್ರ),
ಬಾಹ್ಯ ಅನುದಾನಿತ ಯೋಜನೆಗಳು
ಲೋಕೋಪಯೋಗಿ, ಬಂ ಹಾಗೂ ಒಜಸಾಇ.

ಕರ್ನಾಟಕ ವಿಧಾನಸಭೆ
15ನೇ ವಿಧಾನಸಭೆ
6ನೇ ಅಧಿವೇಶನ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2117
ಮಾನ್ಯ ಸದಸ್ಯರ ಹೆಸರು	:	ಶ್ರೀ. ಶಿವಶಂಕರ ರೆಡ್ಡಿ ಎನ್.ಹೆಚ್. (ಗೌರಿಬಿದನೂರು)
ಉತ್ತರಿಸುವ ದಿನಾಂಕ	:	17-03-2020
ಉತ್ತರಿಸುವ ಸಚಿವರು	:	ಮಾನ್ಯ ಉಪ ಮುಖ್ಯಮಂತ್ರಿಗಳು, (ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಇಲಾಖೆ)

ಕ್ರಸಂ	ಪ್ರಶ್ನೆ	ಉತ್ತರ
ಅ)	ಬೆಂಗಳೂರು ನಗರದಲ್ಲಿ ವಾಹನಗಳ ದಟ್ಟಣೆಯಿಂದ ಟ್ರಾಫಿಕ್ ಜಾಮ್ ಆಗುತ್ತಿರುವ ಹಿನ್ನೆಲೆಯಲ್ಲಿ ವಾಹನಗಳ ಓಡಾಟಕ್ಕೆ Elevated Corridor ಯೋಜನೆಯನ್ನು ಹಿಂದಿನ ಸರ್ಕಾರವು ರೂ.27,000 ಕೋಟಿ ಅಂದಾಜು ವೆಚ್ಚದಲ್ಲಿ ನಿರ್ಮಿಸಲು ಅನುಮೋದಿಸಿದ್ದು, ಪ್ರಸ್ತುತ ಸರ್ಕಾರ ಅದನ್ನು ರದ್ದುಪಡಿಸಿರುವುದು ನಿಜವಲ್ಲವೇ;	ಎಲಿವೇಟೆಡ್ ಕಾರಿಡರ್ ಯೋಜನೆಯನ್ನು ನಾಲ್ಕು ಹಂತಗಳಲ್ಲಿ ಅನುಷ್ಠಾನಗೊಳಿಸಲು ಆದೇಶ ಸಂಖ್ಯೆ: ಲೋಇ/215/ಇಎಪಿ/2018 (P1), ದಿನಾಂಕ:02-03-2019 ರಂತೆ 87.87 ಕಿ.ಮೀ ಉದದ್ದ ಯೋಜನೆಗೆ ರೂ.26,960.00 ಕೋಟಿಗಳಿಗೆ ತಾತ್ವಿಕ ಅನುಮೋದನೆಯನ್ನು ನೀಡಲಾಗಿದ್ದು, 2019-20 ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲು ಒಂದನೇ ಹಂತದ ನಾಲ್ಕು ಪ್ಯಾಕೇಜ್‌ಗಳ ಪೈಕಿ, ಮೂರು ಪ್ಯಾಕೇಜ್‌ಗಳಿಂದ ಒಟ್ಟಾರೆಯಾಗಿ ಬ್ಯಾಪ್ಟಿಸ್ಟ್ ಆಸ್ಪತ್ರೆಯಿಂದ-ಕಂಟೋನ್‌ಮೆಂಟ್-ರಿಚ್‌ಮಂಡ್‌ಸರ್ಕಲ್-ಶಾಂತಿನಗರ ಬಸ್‌ನಿಲ್ದಾಣ- ಬಾಷ್ ಆವರಣ ಮೂಲಕ ಹೊಸೂರು ರಸ್ತೆ ಮುಖಾಂತರ ಸಿಲ್ಕ್ ಬೋರ್ಡ್ ವರೆಗೆ 21.55 ಕಿ.ಮೀ ಉದ್ದಕ್ಕೆ ಎಲಿವೇಟೇಡ್ ಕಾರಿಡಾರ್ ನಿರ್ಮಿಸಲು ರೂ.6,855 ಕೋಟಿ ಮೊತ್ತಕ್ಕೆ (ಭೂಸ್ವಾಧೀನ ಮತ್ತು ಯುಟಿಲಿಟಿ ಸ್ಥಳಾಂತರ ಮೊತ್ತ ಸೇರಿ) ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಮೊದಲನೇ ಹಂತದಲ್ಲಿ ನಾರ್ತ್-ಸೌತ್ ಕಾರಿಡಾರ್ ಅನ್ನು ಮೂರು ಪ್ಯಾಕೇಜ್‌ಗಳಲ್ಲಿ ಕೆಆರ್‌ಡಿಸಿಎಲ್ ವತಿಯಿಂದ ಅನುಷ್ಠಾನಗೊಳಿಸಲು ಅಧಿಸೂಚನೆ ಸಂಖ್ಯೆ: KRDCL/ IFB/2018-19/23 ದಿನಾಂಕ: 02-03-2019 ರಲ್ಲಿ ಬ್ಯಾಪ್ಟಿಸ್ಟ್ ಆಸ್ಪತ್ರೆಯಿಂದ-ಕಂಟೋನ್‌ಮೆಂಟ್-ರಿಚ್‌ಮಂಡ್‌ಸರ್ಕಲ್-ಶಾಂತಿನಗರ ಬಸ್‌ನಿಲ್ದಾಣ-ಬಾಷ್ ಆವರಣ ಮೂಲಕ ಹೊಸೂರು ರಸ್ತೆ ಮುಖಾಂತರ ಸಿಲ್ಕ್ ಬೋರ್ಡ್ ವರೆಗೆ 21.55 ಕಿ.ಮೀ ಉದ್ದಕ್ಕೆ ಎಲಿವೇಟೇಡ್ ಕಾರಿಡಾರ್ ನಿರ್ಮಿಸಲು ನಿರ್ಮಾಣ ಮೊತ್ತ ರೂ.4612.49 ಕೋಟಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಪರಿಷ್ಕೃತ ಕೊನೆಯ ದಿನಾಂಕವು 24-06-2019 ನಿಗದಿಪಡಿಸಲಾಗಿತ್ತು. ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ WP ಸಂಖ್ಯೆ: 48720/2014(PIL) ದಾವೆ ಇದ್ದು, ಪ್ರಕರಣವು ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿದ್ದ ಕಾರಣ ಟೆಂಡರ್‌ನ ಮುಂದಿನ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗಿತ್ತು. ಕೆಆರ್‌ಡಿಸಿಎಲ್ ರವರ ಜ್ಞಾಪನ ಪತ್ರದ ಸಂಖ್ಯೆ 2572 ದಿನಾಂಕ 30-10-2019 ರಲ್ಲಿ ಪ್ರಸ್ತಾಪಿತ ಟೆಂಡರ್‌ಗಳನ್ನು ರದ್ದುಗೊಳಿಸಲಾಗಿದೆ.

ಆ)	ಹಾಗಿದ್ದಲ್ಲಿ ಟ್ರಾಫಿಕ್ ಜಾಮ್ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರ ತೆಗೆದುಕೊಳ್ಳುವ ಕ್ರಮಗಳೇನು:	"ಬೆಂಗಳೂರು ಕ್ರಿಯಾ ಯೋಜನೆ" ಕುರಿತು ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ದಿನಾಂಕ:06-11-2019 ರಂದು ನಡೆದ ಸಭೆಯಲ್ಲಿ ಪೂರ್ವ-ಪಶ್ಚಿಮ ಕಾರಿಡಾರ್-ಪೂರ್ವದಲ್ಲಿರುವ ಮಾಹಿತಿ ತಂತ್ರಜ್ಞಾನ ಹಬ್ಸ್ (ವೈಟ್ ಫೀಲ್ಡ್/ಹೊರವರ್ತುಲ ರಸ್ತೆ/ ಐ.ಟಿ.ಪಿ.ಎಲ್) ಜೊತೆ ಪಶ್ಚಿಮದಲ್ಲಿರುವ ಕೈಗಾರಿಕಾ ಹಬ್ಸ್‌ಗಳನ್ನು (ಯಶವಂತಪುರ/ಪೀಣ್ಯ) ಸಂಪರ್ಕಿಸುವ ಕಾರಿಡಾರ್ ಅನ್ನು ಕೆ.ಆರ್. ಪುರಂ (RMZ ಮಾಲ್)ನಿಂದ ಯಶವಂತಪುರ ವರೆಗೆ ಹಲಸೂರು ಕೆರೆ, ಕಂಟೋನ್ಮೆಂಟ್, ಮೇಖ್ರಿ ವೃತ್ತ ಮುಖಾಂತರ 29.95 ಕಿ.ಮೀ ಉದ್ದಕ್ಕೆ ಮೊದಲನೇ ಹಂತದಲ್ಲಿ 2020-21ನೇ ಸಾಲಿನಲ್ಲಿ ಕೆ.ಆರ್.ಡಿ.ಸಿ.ಎಲ್ ವತಿಯಿಂದ ನಗರಾಭಿವೃದ್ಧಿ ಇಲಾಖೆ ಅನುದಾನದಡಿಯಲ್ಲಿ ಕೈಗೊಳ್ಳುವ ಬಗ್ಗೆ ಚರ್ಚೆಯಾಗಿರುತ್ತದೆ. ಈ ಮೇಲಿನಂತೆ ಎಲಿವೇಟೆಡ್ ಕಾರಿಡಾರ್ ರಸ್ತೆ ಯೋಜನೆಯನ್ನು ಭಾಗಶಃ ಮಾರ್ಪಡಿಸಿ ಸದರಿ ಯೋಜನೆಯನ್ನು ~~ಯಥಾವತ್ತಾಗಿ~~ ತೆಗೆದುಕೊಳ್ಳುವ ಬಗ್ಗೆ ಪರಿಶೀಲನೆಯಲ್ಲಿದೆ.
ಇ)	ಇಲ್ಲದಿದ್ದಲ್ಲಿ ಎಲಿವೇಟೆಡ್ ಕಾರಿಡಾರ್ ರಸ್ತೆ ಯೋಜನೆಯನ್ನು ಭಾಗಶಃ ಮಾರ್ಪಡಿಸಿ ಸದರಿ ಯೋಜನೆಯನ್ನು ಯಥಾವತ್ತಾಗಿ ತೆಗೆದುಕೊಳ್ಳಲಾಗುವುದೇ?	

ಸಂಖ್ಯೆ. ಲೋಇ E-56 ಇಎಪಿ 2020

(ಗೋವಿಂದ ಎಂ. ಕಾರಜೋಳ)
ಮಾನ್ಯ ಉಪ ಮುಖ್ಯಮಂತ್ರಿಗಳು,
(ಲೋಕೋಪಯೋಗಿ ಹಾಗೂ ಸಮಾಜ ಕಲ್ಯಾಣ ಇಲಾಖೆ)

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 60 ಬೆಂಭೂಸ್ವಾ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ, 4ನೇ ಮಹಡಿ,
ಬೆಂಗಳೂರು, ದಿನಾಂಕ:17.03.2020

62
48
17/3/2020

ಇವರಿಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ವಿಕಾಸ ಸೌಧ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಕರ್ನಾಟಕ ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಕೆ.ಜೆ.ಜಾರ್ಜ್(ಸರ್ವಜ್ಞ ನಗರ) ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1210 ಕ್ಕೆ ಉತ್ತರವನ್ನು ಕಳುಹಿಸಿಕೊಡುವ ಬಗ್ಗೆ.

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಕೆ.ಜೆ.ಜಾರ್ಜ್(ಸರ್ವಜ್ಞ ನಗರ) ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1210 ಕ್ಕೆ ಸಂಬಂಧಿಸಿದಂತೆ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಾನು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

17/03/2020

ಸರ್ಕಾರದ ಅಧೀನ ಕಾರ್ಯದರ್ಶಿ ಪರವಾಗಿ
ನಗರಾಭಿವೃದ್ಧಿ ಇಲಾಖೆ.

17/3

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1210
ಸದಸ್ಯರ ಹೆಸರು : ಶ್ರೀ ಕೆ.ಜೆ.ಜಾರ್ಜ್ (ಸರ್ವಜ್ಞನಗರ)
ಉತ್ತರಿಸಬೇಕಾದ ದಿನಾಂಕ : 17.03.2020
ಉತ್ತರಿಸಬೇಕಾದ ಸಚಿವರು : ಮಾನ್ಯ ಮುಖ್ಯಮಂತ್ರಿರವರು

ಕ್ರಸಂ	ಪ್ರಶ್ನೆ	ಉತ್ತರ
ಅ)	ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವತಿಯಿಂದ ನಿರ್ಮಾಣವಾಗಿರುವ ಬಡಾವಣೆಗಳಲ್ಲಿ ನಿರ್ಮಿಸಿರುವ ಒಟ್ಟು ನಿವೇಶನಗಳೆಷ್ಟು; ಈ ಪೈಕಿ ಸಾರ್ವಜನಿಕರಿಗೆ ಹಂಚಿಕೆಯಾಗದೇ ಉಳಿದ ನಿವೇಶನಗಳೆಷ್ಟು; (ಇವುಗಳ ಅಳತೆವಾರು ಸಂಪೂರ್ಣ ವಿವರ ನೀಡುವುದು)	ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಓ.ಎಂ.ಬಿ.ಆರ್. ಬಡಾವಣೆ, ಹೆಚ್.ಆರ್.ಬಿ.ಆರ್. ಬಡಾವಣೆ, ಹಾಗೂ ಹೆಚ್.ಬಿ.ಆರ್. ಬಡಾವಣೆಗಳು ನಿರ್ಮಾಣವಾಗಿರುತ್ತದೆ ಇದರಲ್ಲಿ ಓ.ಎಂ.ಬಿ.ಆರ್. ಬಡಾವಣೆಯಲ್ಲಿ ಒಟ್ಟು 2797 ನಿವೇಶನಗಳನ್ನು ಹೆಚ್.ಬಿ.ಆರ್. ಬಡಾವಣೆಯಲಿ 5152 ನಿವೇಶನಗಳನ್ನು ಹಾಗೂ ಹೆಚ್.ಆರ್.ಬಿ.ಆರ್ ಬಡಾವಣೆಯಲ್ಲಿ 4287 ನಿವೇಶನಗಳನ್ನು ರಚಿಸಲಾಗಿರುತ್ತದೆ. ಇವುಗಳಲ್ಲಿ ಓ.ಎಂ.ಬಿ.ಆರ್. ಬಡಾವಣೆಯಲ್ಲಿ ರಚಿಸಿರುವ ನಿವೇಶನಗಳ ಅಳತೆ ಮತ್ತು ಸಂಖ್ಯೆ ಈ ಕೆಳಕಂಡಂತೆ ಇರುತ್ತದೆ. 20x30 ಅಳತೆಯ 572 ನಿವೇಶನಗಳು 30x40 ಅಳತೆಯ 1354 ನಿವೇಶನಗಳು 40x60 ಅಳತೆಯ 201 ನಿವೇಶನಗಳು 50x80 ಅಳತೆಯ 60 ನಿವೇಶನಗಳು ಮತ್ತು ಅನಿಮಿಯತ ಅಳತೆಯ 610 ನಿವೇಶನಗಳು. ಹೆಚ್.ಆರ್.ಬಿ.ಆರ್.ಬಡಾವಣೆಯಲ್ಲಿ ರಚಿಸಿರುವ ನಿವೇಶನಗಳ ಅಳತೆ ಮತ್ತು ಸಂಖ್ಯೆ ಈ ಕೆಳಕಂಡಂತೆ ಇರುತ್ತದೆ. 20x30 ಅಳತೆಯ 1192 ನಿವೇಶನಗಳು 30x40 ಅಳತೆಯ 2433 ನಿವೇಶನಗಳು 40x60 ಅಳತೆಯ 434ನಿವೇಶನಗಳು 50x80 ಅಳತೆಯ 228 ನಿವೇಶನಗಳು ಮತ್ತು

		ಹೆಚ್.ಬಿ.ಆರ್‌ಬಡಾವಣೆಯಲ್ಲಿ ರಚಿಸಿರುವ ನಿವೇಶನಗಳ ಅಳತೆ ಮತ್ತು ಸಂಖ್ಯೆ ಈ ಕೆಳಕಂಡಂತೆ ಇಗುತ್ತದೆ. 20x30 ಅಳತೆಯ 494 ನಿವೇಶನಗಳು 30x40 ಅಳತೆಯ 3329 ನಿವೇಶನಗಳು 40x60 ಅಳತೆಯ 1114 ನಿವೇಶನಗಳು ಅನಿಮಿಯತ ಅಳತೆಯ 215 ನಿವೇಶನಗಳು. ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಓ.ಎಂ.ಬಿ.ಆರ್., ಹೆಚ್.ಬಿ.ಆರ್ ಮತ್ತು ಹೆಚ್.ಆರ್.ಬಿ.ಆರ್. ಬಡಾವಣೆಗಳನ್ನು ನಿರ್ಮಿಸಲಾಗಿದೆ. ಆದರೆ, ಪ್ರಸ್ತುತ ಈ ಬಡಾವಣೆಗಳಲ್ಲಿ ಯಾವುದೇ ನಿವೇಶನಗಳು ಖಾಲಿ ಇರುವುದಿಲ್ಲ.
ಆ)	ಹಂಚಿಕೆಯಾಗದೇ ಉಳಿದ ನಿವೇಶನಗಳಿಗೆ ಭೂಮಾಫಿಯಾದವರು ಅತಿಕ್ರಮ ಪ್ರವೇಶ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದಯೇ; ಬಂದಿದ್ದಲ್ಲಿ ಸದರಿ ಅತಿಕ್ರಮ ಪ್ರವೇಶವನ್ನು ತೆರವುಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು(ವಿವರ ನೀಡುವುದು)	ಅನುಬಂಧ-1 ರಲ್ಲಿ ಇರುವಂತೆ ಈಗಾಗಲೇ 45 ಪ್ರಕರಣಗಳಲ್ಲಿ ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸಲಾಗಿರುತ್ತದೆ. ಉಳಿದ ಪ್ರಕರಣಗಳಲ್ಲಿ ನ್ಯಾಯಾಲಯದಲ್ಲಿ ಮೊಕದ್ದಮೆಗಳು ದಾಖಲಾಗಿದ್ದು ಇವುಗಳು ಇತ್ಯರ್ಥವಾದ ನಂತರ ಸದರಿ ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸಲು ಎಲ್ಲಾ ಅಗತ್ಯ ಕ್ರಮಕೈಗೊಳ್ಳಲಾಗುವುದು.
ಇ)	ಈವರೆವಿಗೆ ಇಂತಹ ಎಷ್ಟು ಪ್ರಕರಣಗಳನ್ನು ತೆರವುಗೊಳಿಸಲಾಗಿದೆ. ಉಳಿದ ಪ್ರಕರಣಗಳನ್ನು ಯಾವ ಕಾಲಮಿತಿಯಲ್ಲಿ ತೆರವುಗೊಳಿಸಲಾಗುವುದು. ಇಲ್ಲದಿದ್ದಲ್ಲಿ ಕಾರಣಗಳೇನು? (ವಿವರ ನೀಡುವುದು)	

ಸಂಖ್ಯೆ: ನಅಇ 60 ಬೆಂಭೂಸ್ವಾ 2020

(ಬಿ.ಎಸ್ ಯಡಿಯೂರಪ್ಪ)
ಮುಖ್ಯಮಂತ್ರಿ

ಅನುಬಂಧ - 1

ಸರ್ವಜ್ಞ ನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಿರ್ಮಿಸಿರುವ ಬಡಾವಣೆಗಳಲ್ಲಿನ ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸಿರುವ ವಿವರಗಳು

ಕ್ರ ಸಂ.	ಬಡಾವಣೆ	ಗ್ರಾಮ	ಸರ್ವೆ ನಂ/ ನಿವೇಶನ ಸಂ.	ವಿಸ್ತೀರ್ಣ	ತೆರವುಗೊಳಿಸಿದ ದಿನಾಂಕ	ವಿವರ
1	ಹೆಚ್.ಬಿ.ಆರ್ 1ನೇ ಹಂತ	ಹೆಣ್ಣೂರು	ಸರ್ವೆ ನಂ.43 & 48	12000 ಚ.ಅಡಿಗಳು 0–11ಗುಂ	25–08–2016	ಅನಧಿಕೃತ 02 ಶೆಡ್ ಗಳು
2	ಹೆಚ್.ಬಿ.ಆರ್ 4ನೇ ಬ್ಲಾಕ್	ಹೆಣ್ಣೂರು ಗ್ರಾಮ	ಸರ್ವೆ ನಂ.50	30x40 ಚ.ಅಡಿ ವಿಸ್ತೀರ್ಣದ 07 ನಿವೇಶನಗಳು 7 ಗುಂಟೆ	25–08–2016	ಅನಧಿಕೃತ ನಿರ್ಮಾಣ
3	ಹೆಚ್.ಬಿ.ಆರ್ 1ನೇ ಹಂತ, 3ನೇ ಬ್ಲಾಕ್	ಕಾಚರಕನಹಳ್ಳಿ ಗ್ರಾಮ	ಸರ್ವೆ ನಂ.222	21 ಗುಂಟೆ	23–11–2016	ಅನಧಿಕೃತ ನಿರ್ಮಾಣಗಳು
4	ಹೆಚ್.ಬಿ.ಆರ್.1ನೇ ಹಂತದ 2 ಮತ್ತು 3ನೇ ಬ್ಲಾಕ್	ಕಾಚರಕನಹಳ್ಳಿ ಗ್ರಾಮ	ಸರ್ವೆ ನಂ.180, 184	1ಎಕರೆ–30ಗುಂಟೆ	31–12–2016 ರಿಂದ 01–02–2017	ಅನಧಿಕೃತ ನಿರ್ಮಾಣಗಳು
5	ಹೆಚ್.ಬಿ.ಆರ್.1ನೇ ಹಂತ, 4ನೇ ಬ್ಲಾಕ್	ಹೆಣ್ಣೂರು ಗ್ರಾಮ	ಸರ್ವೆ ನಂ.40/5ಬಿ	50*80 & 40*60 ಅಳತೆಯ ವಿಸ್ತೀರ್ಣ ತಲಾ ಒಂದು ನಿವೇಶನ	25–08–2016	ಗೋಡೌನ್ ಗಳು
6	ಹೆಚ್.ಬಿ.ಆರ್.1ನೇ ಹಂತ, 5ನೇ ಬ್ಲಾಕ್	ಹೆಣ್ಣೂರು ಗ್ರಾಮ	ನಿವೇಶನ ಸಂಖ್ಯೆ: 594 ಮತ್ತು 595	ಎರಡು (2) ಸಂಖ್ಯೆಯ 30*40 ನಿವೇಶನಗಳು	25–08–2016	
7	ಓ.ಎಂ.ಬಿ.ಆರ್ ಬಡಾವಣೆ	ಬಾಣಸವಾಡಿ ಗ್ರಾಮ	ಸರ್ವೆ ನಂ.227/2	1ಎಕರೆ 5ಗುಂಟೆ	28–02–2017	ಅನಧಿಕೃತ ಶೆಡ್ ಗಳನ್ನು ತೆರವುಗೊಳಿಸಲಾಗಿದೆ.
8	ಓ.ಎಂ.ಬಿ.ಆರ್ ಬಡಾವಣೆ	ಬಾಣಸವಾಡಿ ಗ್ರಾಮ	ಸರ್ವೆ ನಂ.236/1, 173/10, 37/1	20*30 = 6 ನಿವೇಶನಗಳು, 40*60 = 1 ನಿವೇಶನ	24–04–2017	ಅನಧಿಕೃತ ಶೆಡ್ ಗಳನ್ನು ತೆರವುಗೊಳಿಸಲಾಗಿದೆ.
9	ಹೆಚ್.ಬಿ.ಆರ್.1ನೇ ಹಂತ, 5ನೇ ಬ್ಲಾಕ್	ನಾಗವಾರ ಗ್ರಾಮ	ಸರ್ವೆ ನಂ.4, 5, 6 ಮತ್ತು 7	1ಎ–4.6ಗುಂಟೆ	25–05–2017 26–05–2017	ಅನಧಿಕೃತ ಗ್ಯಾರೇಜ್ ಶೆಡ್ ಗಳು
10	ಹೆಚ್.ಬಿ.ಆರ್.1ನೇ ಹಂತ 4ನೇ ಬ್ಲಾಕ್	ಕಾಚರಕನಹಳ್ಳಿ ಗ್ರಾಮ	197. 198 & 220	ಸಿ.ಎ.ನಿವೇಶನದ ವಿಸ್ತೀರ್ಣ 0ಎ–27ಗುಂಟೆ	27–05–2017	ಅನಧಿಕೃತ ಗ್ಯಾರೇಜ್ ಶೆಡ್ ಗಳು
11	ಚಿಕ್ಕಬಾಣಸವಾಡಿ ಓ.ಎಂ.ಬಿ.ಆರ್ ಬಡಾವಾಣೆ	ಬಾಣಸವಾಡಿ	220		27–05.2017	ಅನಧಿಕೃತ ಶೆಡ್ಡುಗಳನ್ನು ತೆರವುಗೊಳಿಸಲಾಯಿತು.
12	ಹೆಚ್.ಬಿ.ಆರ್ 1ನೇ ಹಂತ, 2ನೇ ಬ್ಲಾಕ್	ಕಾಚರಕನಹಳ್ಳಿ ಗ್ರಾಮ	ಸರ್ವೆ ನಂ.174/ ನಿ.ಸಂಖ್ಯೆ: 808	8.2*12..=98.40 ಚ.ಮೀ	14–02–2018	ಕಾಲಂಗಳನ್ನು ತೆರವುಗೊಳಿಸಿದೆ.

13	ಹೆಚ್.ಬಿ.ಆರ್.1ನೇ ಹಂತ 2ನೇ ಬ್ಲಾಕ್	ಕಾಚರಕನಹಳ್ಳಿ ಗ್ರಾಮ	ಸರ್ವೆ ನಂ.174/ ನಿ.ಸಂಖ್ಯೆ: 784	15*23.20=348 ಚ.ಮೀ.	14-02-2018 ಮತ್ತು 19-02-2018	ಕಾಲಂ ಮತ್ತು ಆರ್.ಸಿ.ಸಿ.ರೂಫ್ ತೆರವುಗೊಳಿಸಿದೆ.
14	ಓ.ಎಂ.ಬಿ.ಆರ್ ಬಡಾವಣೆ	ಬಾಣಸವಾಡಿ	ಸರ್ವೆ ನಂ.155/2 ರ ನಿವೇಶನ ಸಂಖ್ಯೆ: 2ಬಿಸಿ-427	178.12 ಚ.ಮೀ	21-03-2018	ಅನಧಿಕೃತ ಶೆಡ್ಡುಗಳನ್ನು ತೆರವುಗೊಳಿಸಲಾಯಿತು.
15	ಓ.ಎಂ.ಬಿ.ಆರ್ ಬಡಾವಣೆ	ಬಾಣಸವಾಡಿ	ಸರ್ವೆ ನಂ.159/1 ರ ನಿವೇಶನ ಸಂಖ್ಯೆ: 2ಎಸಿ-438	130.66 ಚ.ಮೀ.	22-03-2018	ಅನಧಿಕೃತ ಶೆಡ್ಡುಗಳನ್ನು ತೆರವುಗೊಳಿಸಲಾಯಿತು.
16	ಹೆಚ್.ಆರ್.ಬಿ.ಆರ್.ಬಡಾವಣೆ 2ನೇ ಬ್ಲಾಕ್	ಚಳ್ಳಕೆರೆ	ಸರ್ವೆ ನಂ.96/1,2,3 ನಿವೇಶನ ಸಂಖ್ಯೆ: 4ಎಎಸಿ-421, 4ಎಎಸಿ-425, 4ಎಎಸಿ-426	4000 ಚ.ಅಡಿ	06-09-2018	ಅನಧಿಕೃತ ಕಾಂಪೌಂಡ್ ಗೋಡೆಯನ್ನು ತೆರವುಗೊಳಿಸಲಾಯಿತು.
17	ಹೆಚ್.ಬಿ.ಆರ್ ಬಡಾವಣೆ	ಕಾಚರಕನಹಳ್ಳಿ	ಸರ್ವೇ ನಂ.75, 180, 184,	2 ಎಕರೆ 5 ಗುಂಟೆ	30/12/2016	ಕಾರು ಗ್ಯಾರೇಜ್, ಹೋಟೆಲ್, ಅಂಗಡಿ ಶೆಡ್ ಸೇರಿದಂತೆ ಒಟ್ಟು 20 ಎ.ಸಿ.ಶೀಟ್ ಶೆಡ್ ಗಳು, ನಿರ್ಮಾಣ ಹಂತದ ಆರ್.ಸಿ.ಸಿ. ಕಟ್ಟಡ, ಖಾಲಿ ನಿವೇಶನಗಳಿಗೆ ತಂತಿ ಬೇಲಿ ಅಳವಡಿಸಿರುತ್ತದೆ
18	ಓ.ಎಂ.ಬಿ.ಆರ್ ಬಡಾವಣೆ	ಬಾಣಸವಾಡಿ	ಸರ್ವೆ ನಂ.173/10	ನಿ.ಸಂ.2ಡಿಸಿ-315 ನಿ.ಸಂ.2ಡಿಸಿ 317 20'ಥ30' -1200ಚ.ಅಡಿ (2.20ಗುಂಟೆ)	28-02-2017	ಅನಧಿಕೃತ ನಿರ್ಮಾಣ ತೆರವು & ತಂತಿ ಬೇಲಿ ಅಳವಡಿಸಲಾಗಿದೆ.
19	ಓ.ಎಂ.ಬಿ.ಆರ್ ಬಡಾವಣೆ	ಬಾಣಸವಾಡಿ	ಸರ್ವೆ ನಂ.37/1	ಮೂಲೆ ನಿ.ಸಂ.5ಎಂ-675, 3000 ಚ.ಅಡಿ (2.75 ಗುಂಟೆ)	28-02-2017	01 ಶೆಡ್ ಮತ್ತು 10 ಟೆಂಟ್ ಗಳ ತೆರವು
20	ಈಸ್ಟ್ ಆಫ್ ಎನ್.ಜಿ.ಇ.ಎಫ್	ಬಾಣಸವಾಡಿ	ಸರ್ವೆ ನಂ.116	ನಿ.ಸಂ.4ಸಿ-107 1500 ಚ.ಅಡಿ (1.37ಗುಂಟೆ)	28-02-2017	06 ತಗಡಿನ ಶೆಡ್ ಗಳು

21	ಹೆಚ್.ಆರ್.ಬಿ.ಆರ್ 1ನೇ ಬ್ಲಾಕ್	ಬಾಣಸವಾಡಿ	ಸರ್ವೆ ನಂ.327/2 (ಬಾಬುಸಾಪಾಳ್ಯ)	02 ಮೂಲೆ ನಿವೇಶನಗಳು 30x40=2=2.20 ಗುಂಟೆ	11-03-2017	ಅನಧಿಕೃತ 03 ಎ.ಸಿ.ಶೀಟ್
22	ಹೆಚ್.ಬಿ.ಆರ್.1ನೇ ಹಂತದ 1 ಮತ್ತು 2ನೇ ಬ್ಲಾಕ್	ಕಾಚರಕನಹಳ್ಳಿ	190	1ಎ-27ಗುಂಟೆ	16-01-2017	ಎ.ಸಿ.ಶೀಟ್ ಶೆಡ್ ಮತ್ತು ಆವರಣ ಗೋಡೆ ಇರುತ್ತದೆ.
23	ಹೆಚ್.ಬಿ.ಆರ್.1ನೇ ಹಂತದ 1 ಮತ್ತು 2ನೇ ಬ್ಲಾಕ್	ಕಾಚರಕನಹಳ್ಳಿ	194	3ಎ-05ಗುಂಟೆ	26-01-2017	ಎ.ಸಿ.ಶೀಟ್ ಶೆಡ್ ಮತ್ತು ಆವರಣ ಗೋಡೆ ಇರುತ್ತದೆ.
24	ಹೆಚ್.ಬಿ.ಆರ್	ಕಾಚರಕನಹಳ್ಳಿ	ಸರ್ವೆ ನಂ.46 &56		10-03-2009	ಅನಧಿಕೃತ ಶೆಡ್ ಗಳನ್ನು ತೆರವುಗೊಳಿಸಲಾಗಿದೆ.
25	ಹೆಚ್.ಬಿ.ಆರ್	ಕಾಚರಕನಹಳ್ಳಿ	ಸರ್ವೆ ನಂ.226		10-03-2009	ಅನಧಿಕೃತ ಶೆಡ್ ಗಳನ್ನು ತೆರವುಗೊಳಿಸಲಾಗಿದೆ.
26	ಹೆಚ್.ಬಿ.ಆರ್.1ನೇ ಹಂತ	ಕಾಚರಕನಹಳ್ಳಿ	ಸರ್ವೆ ನಂ.154 &155		02-04-2009	ಅನಧಿಕೃತ ಶೆಡ್ ಗಳನ್ನು ತೆರವುಗೊಳಿಸಲಾಗಿದೆ.
27	ಓ.ಎಂ.ಬಿ.ಆರ್ ಬಡಾವಣೆ	ಬಾಣಸವಾಡಿ	ಸರ್ವೆ ನಂ.27&30/2		26-05-2011	ಅನಧಿಕೃತ ಶೆಡ್ ಗಳನ್ನು ತೆರವುಗೊಳಿಸಲಾಗಿದೆ.
28	ಹೆಚ್.ಬಿ.ಆರ್.1ನೇ ಹಂತದ 4 ನೇ ಬ್ಲಾಕ್	ಹೆಣ್ಣೂರು	ಸರ್ವೆ ನಂ.36/2		21-01-2012	ಅನಧಿಕೃತ ಶೆಡ್ ಗಳನ್ನು ತೆರವುಗೊಳಿಸಲಾಗಿದೆ.
29	ಓ.ಎಂ.ಬಿ.ಆರ್ ಬಡಾವಣೆ	ಬಾಣಸವಾಡಿ	ಸರ್ವೆ ನಂ.155/1, ನಿವೇಶನ ಸಂಖ್ಯೆ 2AC 438		23-08-2018	ಅನಧಿಕೃತ ಶೆಡ್ ಗಳನ್ನು ತೆರವುಗೊಳಿಸಲಾಗಿದೆ.
30	ನಾಗವಾರ		ಸರ್ವೆ ನಂ.73/1		04.06.2018	ಅನಧಿಕೃತ ಶೆಡ್ ಗಳನ್ನು ತೆರವುಗೊಳಿಸಲಾಗಿದೆ.
31	ಹೆಚ್.ಬಿ.ಆರ್.1ನೇ ಹಂತ	ಕಾಚರಕನಹಳ್ಳಿ	ಸರ್ವೆ ನಂ.153, 144, 145, 136, 140, 138		18.09.2019	ಅನಧಿಕೃತ ಶೆಡ್ ಗಳನ್ನು ತೆರವುಗೊಳಿಸಲಾಗಿದೆ.
32	ಹೆಚ್.ಬಿ.ಆರ್.1ನೇ ಹಂತದ 2 ನೇ ಬ್ಲಾಕ್	ಕಾಚರಕನಹಳ್ಳಿ	ಸರ್ವೆ ನಂ. 174		20.01.2020	ಅನಧಿಕೃತ ಶೆಡ್ ಗಳನ್ನು ತೆರವುಗೊಳಿಸಲಾಗಿದೆ.
33	ಹೆಚ್.ಬಿ.ಆರ್.1ನೇ ಹಂತದ 2 ನೇ ಬ್ಲಾಕ್	ಕಾಚರಕನಹಳ್ಳಿ	ಸರ್ವೆ ನಂ. 174		20.01.2020	ಅನಧಿಕೃತ ಶೆಡ್ ಗಳನ್ನು ತೆರವುಗೊಳಿಸಲಾಗಿದೆ.
34	ಹೆಚ್.ಬಿ.ಆರ್.1ನೇ ಹಂತದ 2 ನೇ ಬ್ಲಾಕ್	ಕಾಚರಕನಹಳ್ಳಿ	ಸರ್ವೆ ನಂ. 174		20.01.2020	ಅನಧಿಕೃತ ಶೆಡ್ ಗಳನ್ನು ತೆರವುಗೊಳಿಸಲಾಗಿದೆ.
